ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೨, ಸಂಚಿಕೆ ೧೧, ಏಪ್ರಿಲ್ ೨೦೧೫

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಈಗಿನ ಸುದ್ದಿ ... ಪು. ೧
ರಾಮನವಮಿ - ವರದಿ ... ಪು. ೨
ಸಂಪಾದಕೀಯ ... ಪು. ೩

ಚಿಲುಮೆಯ ಒಳಗೆ

ಏಪ್ರಿಲ್ ೧ ಆಗಬೇಕೆ-ಹಾಸ್ಯ ... ಪು. ೪
ವಿಚಾರ-ವಿಹಾರ ... ಪು. ೬
ರಾಂ ರಾಮ! ಹಾಸ್ಯ ... ಪು. ೭

ಚಿಲುಮೆಯ ಒಳಗೆ

ಕಥಾಚಿಲುಮೆ ... ಪು. ೧೦
ರೆಸಿಪಿ ಕೊಡ್ತೀರಾ! ... ಪು. ೧೦
ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೧

ಚಿಲುಮೆಯ ಒಳಗೆ

ಪದ ಪುಂಜ/ರಂಗೋಲಿ ... ಪು. ೧೩
ಮೊಬೈಲ್ ಮತ್ತು ದೇವರು-ಹಾಸ್ಯ ... ಪು. ೧೪

ಚಿಲುಮೆಯ ಒಳಗೆ

ವಿಜ್ಞಾನ ... ಪು. ೧೫
ಅಲ್ಲಲ್ಲಿ ಏನೇನು ... ಪು. ೧೫

ಓದುಗರ ಚೆನ್ನುಡಿ
ಪುಟ ೧೨

ಈಗಿನ ಸುದ್ದಿ

ಸಿಡ್ನಿಯಲ್ಲಿ ಮೈತ್ರಿ ಚಿತ್ರ ಪ್ರದರ್ಶನ – ವರದಿ

ಇತ್ತೀಚೆಗಂತೂ ಕನ್ನಡ ಚಿತ್ರ ರಸಿಕರಿಗೆ ಹಬ್ಬದ ಮೇಲೆ ಹಬ್ಬ. ಇದೇನಪ್ಪಾ ಇದು ಕನ್ನಡಿಗರಿಗೆ ಮಾತ್ರ ಬರುವ ಹಬ್ಬವೇ! ಅದ್ಯಾವುದು? ಕನ್ನಡ ರಾಜ್ಯೋತ್ಸವ ಒಂದೇ ಅಲ್ಲವೇ ಅನಿಸಬಹುದು. ಕನ್ನಡ ಸಿನಿಮಾ ಎಂದರೆ ಕನ್ನಡ ಚಿತ್ರ ರಸಿಕರಿಗೆ ಹಬ್ಬಕ್ಕೆ ಕಡಿಮೆಯೇನಲ್ಲ.

ಕನಕಾಪುರ ನಾರಾಯಣ ಮತ್ತು ನಾಗಭೂಷಣ ಅವರ ಸಹಯೋಗದಲ್ಲಿ ಸೂಪರ್ ಹಿಟ್ ಚಿತ್ರಗಳಾದ ಪ್ರಕಾಶ್ ರೈ ರವರ ಒಗ್ಗರಣೆ, ಅಣ್ಣಾವ್ರ ವರ್ಣರಂಜಿತ "ಕಸ್ತೂರಿ ನಿವಾಸ" ಚಿತ್ರಗಳನ್ನು ಸಿಡ್ನಿಯ ಕನ್ನಡ ರಸಿಕರಿಗೆ ತಲುಪಿಸಿ ಎಲ್ಲರೂ ಮುಂದಿನ ಚಿತ್ರ ಯಾವುದು ಎಂದು ಕಾಯುವ ಹಾಗಾಗಿತ್ತು. ಎಲ್ಲರ ಆಕಾಂಕ್ಷೆಗೆ ತಕ್ಕಂತೆ ಕನ್ನಡದ ಪವರ್ ಸ್ಟಾರ್ ಅಣ್ಣಾವ್ರ ಮಗ ಪುನೀತ್ ರಾಜಕುಮಾರ್ ರವರ ಯಶಸ್ವೀ ಚಿತ್ರ "ಮೈತ್ರಿ" ಯನ್ನು ಸಿಡ್ನಿ ಕನ್ನಡಿಗರಿಗಾಗಿ ಪೂರ್ವ ನಿಯೋಜಿತವಾಗಿ ಲಿವರ್ಪೂಲ್ ನ ಇವೆಂಟ್ ಸಿನಿಮಾಸ್ ನಲ್ಲಿ ಪ್ರದರ್ಶನ ಏರ್ಪಡಿಸಿದ್ದರು.

ಮೊದಲು ಒಂದು ಪ್ರದರ್ಶನ ಎಂದು ಪ್ರಾರಂಭವಾಗಿ ಚಿತ್ರ ರಸಿಕರ ಉತ್ಸಾಹಕ್ಕೆ ಪೂರಕವಾಗಿ ಎರಡನೇ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಮಾರ್ಚ್ ೨೨ ರಂದು ಮಧ್ಯಾಹ್ನ ೩ ಘಂಟೆಗೆ ಸರಿಯಾಗಿ ಸಿನಿಮಾ ೪ ಮತ್ತು ೬ ರಲ್ಲಿ ಪ್ರದರ್ಶನ ಏರ್ಪಾಟಾಗಿತ್ತು. ಭರ್ತಿಯಾದ ಮಂದಿರಗಳಲ್ಲಿ ಪ್ರೇಕ್ಷಕರೆಲ್ಲರೂ ಕಾದು ಕುಳಿತಿರುವಾಗ, ಕನ್ನಡಿಗರ ತಾಳ್ಮೆಯ ಪರೀಕ್ಷೆಯೋ ಎಂಬಂತೆ ತಾಂತ್ರಿಕ ಅಡಚಣೆಯಿಂದಾಗಿ ಚಿತ್ರದ ಪ್ರಾರಂಭ ನಿಧಾನವಾಯಿತು. ಅತ್ಯಂತ ಸಹನೆಯಿಂದ ವರ್ತಿಸಿದ ಪ್ರೇಕ್ಷಕರ ವರ್ತನೆ ಕನ್ನಡಿಗರ ಸ್ವಭಾವಕ್ಕೆ ಹಿಡಿದ ಕನ್ನಡಿಯಾಗಿತ್ತು.

ಹಿಂದಿಯ ಸ್ಲಂ ಡಾಗ್ ಮಿಲಿಯನೇರ್ ನೆನಪಿಸುವ ಚಿತ್ರದಂತೆ ಪ್ರಾರಂಭವಾದ ಚಿತ್ರ ನಮ್ಮ ಸುತ್ತ ನಡೆವ ಕಥೆಯಂತೆ ಸಾಗಿ ಸಿದ್ರಾಮನ ಪುನೀತ್ ಅಭಿಮಾನ, ಅವನ ಬುದ್ಧಿಶಕ್ತಿ, ನೆನಪಿನಶಕ್ತಿ ಹಾಗು ಜೀವನದ ವಿಷಮ ಪರಿಸ್ಥಿತಿಗಳ ಪರಿಚಯವಾಗುತ್ತದೆ. ಸಿದ್ರಾಮ ಕೋಟ್ಯಾಧಿಪತಿ ಆಟಕ್ಕೆ ಆಯ್ಕೆ ಆಗುವುದು ಹಾಗು ಅದಕ್ಕೆ ತಯಾರಿ ನಡೆಸುವುದು, ಆಟದ ಕೊನೆ ಹಂತ ಎಲ್ಲವನ್ನೂ ಪ್ರೇಕ್ಷಕರು ಕುತೂಹಲದಿಂದ ಮುಂದೇನು ಎಂದು ಕಾಯುವಾಗ ಕಥೆಗೆ ಟ್ವಿಸ್ಟ್ ಎಂಬಂತೆ ಮೋಹನಲಾಲ್ ರ ಪಾತ್ರದ ಪರಿಚಯವಾಗುತ್ತದೆ. ಕಥೆಗೆ ರೋಚಕವಾದ ಮುಕ್ತಾಯದೊಂದಿಗೆ ಚಿತ್ರದಿಂದ ಹಲವಾರು ಸಂದೇಶಗಳನ್ನು ಜನರಿಗೆ ತಲುಪಿಸುವ ಉದ್ದೇಶ ಚಿತ್ರದ್ದಾಗಿತ್ತು.

ಒಟ್ಟಿನಲ್ಲಿ ಕನ್ನಡಿಗರಿಗೆ ವಿಶಿಷ್ಟ ಚಿತ್ರಗಳನ್ನು ತಲುಪಿಸಿ, ಕರುನಾಡಿನಿಂದ ದೂರ ಇರುವ ಕೊರತೆ ನೀಗಿಸಿ, ಕನ್ನಡಿಗರನ್ನು ಒಟ್ಟಾರೆ ಬೆಸೆಯುವ ಪ್ರಯತ್ನದಂತಿತ್ತು. ಹೀಗೆ ಇಂತಹ ಕನ್ನಡ ಚಿತ್ರಗಳು ನಿರಂತರವಾಗಿ ಪ್ರದರ್ಶನವಾಗಲಿ ಎಂದು ಆಶಿಸೋಣ. ▪

ವರದಿ: ನಾಗೇಂದ್ರ ಅನಂತಮೂರ್ತಿ

ಕೇ ಳೋ ಣ

ಟಿ.ಪಿ.ಕೈಲಾಸಂ ರವರ
"ಕಾಶಿಗೋದ ನಂ ಭಾವ ..." ಕೇಳಲು
ಮೇಲಿನ ಚಿತ್ರವನ್ನು ಕ್ಲಿಕ್ ಮಾಡಿ (Click picture to view)

ಓದುಗರ ಚೆನ್ನುಡಿ
ಪುಟ ೧೨

ಫೇಸ್ಬುಕ್ ಬಗ್ಗೆ
ಅಣಕು ಹಾಡು ಕೇಳಲು
ಮೇಲಿನ ಚಿತ್ರವನ್ನು ಕ್ಲಿಕ್ ಮಾಡಿ (Click picture to view)

ನೋ ಡೋ ಣ

ಸಿಡ್ನಿ ಮುರುಗನ್ ದೇವಸ್ಥಾನದಲ್ಲಿ ...

ವರದಿ: ಮಹಾಂತೇಶ್

ಹಳೇ ರೇಷ್ಮೆ ಸೀರೆಗಳಲ್ಲಿ ಮಿರಿಮಿರಿ ಮಿಂಚುತ್ತಿರುವ ಅಜ್ಜಿಯಂದಿರು, ಬಂಗಾರದ ಪ್ರದರ್ಶನ ನಡೆತ್ತಿರುವ ಹಾಗೆ ತೋರುವ ಹೆಂಗಸರು, ಡುಮು-ಡುಮು ಎಂದು ವಾದ್ಯವನ್ನು ಬಾರಿಸುತ್ತಿರುವ ವಾಲಗದವರು, ಲಂಗ ಧಾವಣಿಯಲ್ಲಿ ಒಲವಿನಿಂದ ಓಡಾಡುತ್ತಿರುವ ಪೋರಿಯರು, ಅಂಗಳದ ತುಂಬಾ ಕೀಟಲೆ ಮಾಡುತ್ತಿರುವ ಹುಡಗರು, 'ಇಂಗವಾ', 'ಅಪ್ಪಡಿಯಾ' ಅಂತ ಧಾವಂತ ಮಾಡುತ್ತಿರುವ ತಮಿಳು ಕಾರ್ಯಕರ್ತರು, ಹೊಸದಾಗಿ ಮದುವೆಯಾಗಿ ಬಂದ ನವದಂಪತಿಗಳು, ಮಗುವನ್ನು ಪ್ರಾಮ್ನಲ್ಲಿ ತಳ್ಳುತ್ತಿರುವ ತಾಯಂದಿರು, ಭರತ ಖಂಡೇ ಬದಲು ಆಸ್ಟ್ರೇಲಿಯಾ ದೇಶೇ, ಸಿಡ್ನಿ ಶುಭ ನಗರೇ, ಎಂಬ ಮಂತ್ರಗಳು ಕೇಳಿ ಬಂದ ಕ್ಷಣ, ನಾವೇನಾದರೂ ತಮಿಳುನಾಡಿನಲ್ಲಿದ್ದೀವಾ? ಇಲ್ಲಾ ಸಿಡ್ನಿ ಮುರಗನ ದೇವಸ್ಥಾನದಲ್ಲಿದ್ದೀವಾ? ಅನ್ನುವ ಗಲಿಬಿಲಿ ಮನಸ್ಸಿನಲ್ಲಾಯಿತು.

ಹನುಮನ ಬಾಲಕ್ಕಿಂತಲೂ ಉದ್ದವಾಗಿ ಊಟಕ್ಕೆ ನಿಂತ ಸಾಲು, ಮಗುವಿಗೆ, ಹೆಂಡತಿಗೆ ಮತ್ತು ತನಗೆ ಅಂತ ಊಟದ ಪ್ಲೇಟುಗಳನ್ನು ಕೈಯಲ್ಲಿ ಹಿಡಿದು ಸರ್ಕಸ್ ಮಾಡುತ್ತಿರುವ ಗಂಡಸರು, ದೇವರಿಗೆ ಸಾಷ್ಟಾಂಗ ನಮಸ್ಕಾರ ಬೀಳುತ್ತಿರುವ ದೈವ ಭಕ್ತರು, ಮಗುವನ್ನು ಗಂಡನ ಕೈಯಲ್ಲಿ ಕೊಟ್ಟು ಅವಸರಕ್ಕೆ ಅಂತ ಸರಬರ ಆ ಕಡೆ ಹೋದ ಹೆಂಡತಿ, ಬಿಸಿಲನ್ನು ಲೆಕ್ಕಿಸದೇ ಸರತಿಯಲ್ಲಿ ನಿಂತ ಭಕ್ತಾದಿಗಳು, ಸಿಕ್ಕಿದ್ದೇ ಅವಕಾಶ ಅಂತ ಸರಿಯಾಗಿ ಪ್ರಸಾದ ತಿನ್ನುತ್ತಿರುವ ಬ್ಯಾಚಲರ್ಸೂ, ಸದ್ಯ ಇವತ್ತಾದರೂ ಅಡುಗೆ ಕಾಟ ತಪ್ಪಿತಲ್ಲಾ ಅಂತ ಸಂತಸ ಪಡುತ್ತಿರುವ ಹೆಂಗಸರು, ಇತ್ಯಾದಿ ದೃಶ್ಯಗಳು ಕಾಣಬಂದದ್ದು ರಾಮಾನವಿಮಿಯಂದು ಸಿಡ್ನಿ ಮುರಗನ ಮಂದಿರದಲ್ಲಿ.

ಮುರಗನ್ ಶಿವನ ಮಗ, ಗಣಪತಿಯ ತಮ್ಮ, ಅವನ ದೇವಸ್ಥಾನದಲ್ಲಿ ರಾಮನಿಗೇನು ಕೆಲಸ? ಅದ್ದೂರಿ ಪೂಜೆ ಮಾಡಿಸಿಕೊಂಡ ಮೂರ್ತಿ ರಾಮನದಾ? ಇಲ್ಲಾ ಮುರಗನ ಮೂರ್ತಿಗೇನಾ ಅನ್ನೋ ಪ್ರಶ್ನೆಗಳಿಗೆ ಕೊನೆಯವರೆಗೂ ಉತ್ತರ ಸಿಗಲಿಲ್ಲ. ದೇವರು ಯಾರಾದರೇನು?? "ಇನ್ನೂ ಯಾಕ ಬರಲಿಲ್ಲವಾ ಕೆಲಸದ ಅಪರ್" ಅಂತ ಬೇಂದ್ರಜ್ಜನ ರೀತಿಯಲ್ಲಿ ಗುನುಗುನಸ್ತಾ, ಚಿಂತೆಯಲ್ಲಿರುವ ನಾನು, ಕೆಲಸ ಸಿಕ್ರೆ ಸಾಕು ಅನ್ನುವ ಬೇಡಿಕೆಯೊಂದಿಗೆ ಹೊರಬಂದೆ. ▪

ಅಂದಿನ ಇಂದಿನ ನನ್ನ ಶ್ರೀ ರಾಮನವಮಿ

ವರದಿ: ಸೀತಾ ಕೇಶವ

ಬಾಲ್ಯದ ದಿವಸಗಳ ರಾಮನವಮಿ ನೆನಸಿಕೊಳ್ಳುತ್ತಿರುವಾಗ ನನ್ನ ಅಕ್ಕನೂ ಸ್ಕೈಪ್ ನಲ್ಲಿ ಬಂದು ಅವಳ ಹತ್ತಿರನೂ ನೆನಪುಗಳನ್ನು ಹಂಚಿಕೊಂಡು ನಾನು ಹಬ್ಬದಲ್ಲಿ ಪಾನಕ, ಕೋಸಂಬರಿ, ರಸಾಯನ, ಗೊಜ್ಜವಲಕ್ಕಿ, ರಾಮದೇವರ ಪ್ರಸಾದ ಮಾಡುವುದೂ ತಿಳಿಸಿದೆ. ಆಗ ಅವಳೂ ಜಯನಗರ ನಾಲ್ಕನೇ ಬ್ಲಾಕ್ ನಲ್ಲಿ ದೊಡ್ಡ ಮೈದಾನ, ವಾಟರ್ ಟಾಂಕ್ ಇದ್ದ ಜಾಗದಲ್ಲಿ ಚಪ್ಪರ ಹಾಕಿ ರಾಮನವಮಿ ಹಬ್ಬ ಒಂಬತ್ತು ದಿವಸಗಳು ಆಚರಿಸುತ್ತಿದ್ದು, ಪ್ರತಿದಿವಸ ಸಾಯಂಕಾಲ ಸಂಗೀತ ವಿದ್ವಾಂಸರುಗಳಿಂದ ಸಂಗೀತ ಕಛೇರಿ ಕೇಳುತ್ತಿದ್ದುದನ್ನು ಜ್ಞಾಪಿಸಿಕೊಂಡಳು, ನನಗೆ ನೆನಪಿನಲ್ಲಿರುವಹಾಗೆ, ಎ.ಸುಬ್ಬರಾವ್, ಆರ್.ಕೆ.ಶ್ರೀಕಂಠನ್, ಆರ್.ಆರ್.ಕೇಶವಮೂರ್ತಿ, ಮಹಾಲಿಂಗಂ,(ತಡವಾಗಿ ಬಂದು ಇಬ್ಬರು ಹಿಡಿದುಕೊಂಡು ವೇದಿಕೆಯಮೇಲೆ ಕೂಡಿಸಿದ್ದು), ಹೆಚ್.ವಿ.ಕೃಷ್ಣಮೂರ್ತಿ ಮತ್ತು ನನ್ನ ಸಂಗೀತ ಮೇಷ್ಟರು ಕೆ.ಎಸ್.ವೆಂಕಟರಾಮಯ್ಯ ಹಾಗೂ ಇನ್ನೂ ಅನೇಕ ವಿದ್ವಾಂಸರುಗಳ ಸಂಗೀತ ಇರುತ್ತಿತ್ತು. ಬೆಳಗ್ಗೆ ಕರೆದ ಮನೆಗಳಿಗೆ ಹೋಗಿ ಪಾನಕ ಕೋಸಂಬರಿ ಎಲಡಿಕೆತಂದು ತಿಂದು ಸಾಯಂಕಾಲ ಸಂಗೀತಕ್ಕೆ ಸ್ನೇಹಿತರುಗಳ ಜೊತೆ ಚಪ್ಪರಕ್ಕೆ ನಡೆದು ಹಾಸಿದ ಜಮಖಾನದ ಮೇಲೆ ಮುಂದೆ ಕೂತು ಕಛೇರಿ ಕೇಳುವುದು. ನಾನು, ವಸಂತ, ಛಾಯ, ವಿಜಯಾ ಕಾಲೇಜ್ ಆಫ್ ಮ್ಯೂಸಿಕ್ ನಲ್ಲಿ ಶ್ರೀ ಕೆ.ಎಸ್.ವೆಂಕಟರಾಮಯ್ಯ ಹತ್ತಿರ ಕಲಿಯುತ್ತಿದ್ದೆವು. ನಮಗೆ ಹೇಳಿಕೊಟ್ಟ ಕೀರ್ತನೆ ಯಾವುದಾದರೂ ಹೇಳಿಬಿಟ್ಟರೆ ಸಾಕು ಒಬ್ಬರ ಮುಖ ಒಬ್ಬರು ನೋಡಿಕೊಂಡು ಖುಷಿಯಾಗಿ ಹುಮ್ಮಸ್ಸಿನಿಂದ ಕೇಳುತ್ತಿದ್ದೆವು. ಪಟ್ಟಾಭಿಷೇಕದ ದಿವಸ ಸಾಯಂಕಾಲ ಸಂಗೀತ ಸ್ಪರ್ಧೆ ನಡೆಯುತ್ತಿತ್ತು. ಒಂದು ವರ್ಷ ಹೆಸರುವಾಸಿಯಾದ ಆರ್.ಎ.ಎನ್. ಸ್ಟೋರ್ಸ್ ನವರು ಭಾಗವಹಿಸಿದ ಸ್ಪರ್ಧಿಗಳಿಗೆಲ್ಲಾ 'ಪೆನ್' ಬಹುಮಾನ ಕೊಟ್ಟಿದ್ದರು. ನನಗೂ ಸಿಕ್ಕಿತ್ತು!! ಇದೆಲ್ಲಾ 'ಹಚ್ಚ ಹಸಿರಿನಂತೆ' ಮನಸ್ಸಿನಲ್ಲಿ ಉರಿಬಿಟ್ಟಿದೆ. ಸುಮಾರು ವರ್ಷಗಳಿಂದೀಚೆಗೆ ಅಲ್ಲಿ ಜನತಬಜಾರ್ ನಾನಾತರಹದ ಅಂಗಡಿಗಳೆಲ್ಲಾಬಂದು ಹಿಂದೆ ವಸತಿಜಾಗ ವಾಗಿದ್ದು ಈಗ ವಾಣಿಜ್ಯವಾಗಿ ದೊಡ್ಡ ದೊಡ್ಡ ಮಳಿಗೆಗಳು, ಹೆಸರಾಂತ ಅಂಗಡಿಗಳು ಎದ್ದು ನಿಂತಿವೆ .

ಈಸಲದ ರಾಮನವಮಿ ಶನಿವಾರ ಬಂದು ಸಿಡ್ನಿಯ ಎಸ್.ಎಮ್.ಸಿ ನವರು (ಸಿಡ್ನಿ ಮ್ಯೂಸಿಕ್ ಸರ್ಕಲ್) ಪ್ರತಿ ತಿಂಗಳು ನಡೆಸುವ ಸಂಗೀತ ಕಛೇರಿ ಕೂಡಿಕೊಂಡು ಬಂದಿದ್ದು ಅಲ್ಲಿಗೆ ನಮ್ಮ ಸ್ನೇಹಿತರೊಡನೆ ಹೋಗುವ ವ್ಯವಸ್ಥೆ ಮಾಡಿಕೊಂಡು ಅವರು ಮನೆಗೆ ಬಂದಾಗ ಪಾನಕ, ಎಲಡಿಕೆ ಕೊಟ್ಟು ಕಛೇರಿಗೆ ಹೋಗುವಾಗ, ತಮಿಳುನಾಡು ಮತ್ತು ಕರ್ನಾಟಕದವರು ಮಾಡುವ ವಿವಿಧ ರೀತಿಯ ಪಾನಕದ ಬಗ್ಗೆ ಮಾತನಾಡಿಕೊಂಡು ಹೋದೆವು. ಶ್ರೀ. ಗಿರಿಧರ್ ಅವರು ರಾಮಪಟ್ಟಾಭಿಷೇಕದ ಮೇಲೆ ಹಾಡು, ಸ್ಲೈಡ್ಸ್ ಬಹಳ ಚೆನ್ನಾಗಿ ತೋರಿಸಿದರು. ನಂತರ ಶ್ರೀಮತಿ ಸಂಗೀತ ಅಯ್ಯರ್ ಕೂಡ ವಿವಿದ ವಾಗ್ಗೇಯಕಾರರ ಶ್ರೀ ರಾಮ ಕೃತಿಗಳನ್ನೇ ಅದ್ಭುತವಾಗಿ ಹಾಡಿದ್ದನ್ನ ಕೇಳಿಕೊಂಡು ಬರುವ ಸದವಕಾಶವಾಯಿತು. ರಾಮಪಟ್ಟಾಭಿಷೇಕವಾದನಂತರ ಅಲ್ಲಿಯೂ ಪಾನಕ, ಮಜ್ಜಿಗೆ ವಿತರಣೆಯಾಗಿ ರಾಮನವಮಿ ಪೂರ್ಣಗೊಂಡಿತು. ▪

ಸಂಪಾದಕೀಯ

ಬದರಿ
ತ್ಯಾಮಗೊಂಡ್ಲು

ಏಪ್ರಿಲ್ ತಿಂಗಳು ಬಂತೆಂದರೆ, ಆಸ್ಟ್ರೇಲಿಯಾದಲ್ಲಿ ಚಳಿಗಾಲಕ್ಕೆ ಇನ್ನೊಂದೇ ಹೆಜ್ಜೆ ಎನ್ನುವಂತಿರುತ್ತದೆ. ಮರಗಳಲ್ಲೆಲ್ಲಾ ಮಾಗಿದ ಎಲೆಗಳು. ಕೆಲವಂತೂ ಬಣ್ಣ ಬಣ್ಣದ್ದು. ಒಟ್ಟಿನಲ್ಲಿ, ನಿಸರ್ಗದ ಆ ನೋಟವೇ ನೋಡಲು ಚೆನ್ನ. ಪ್ರಕೃತಿಯಲ್ಲಿನ ಈ ಬದಲಾವಣೆಗೆ ಬಹುತೇಕ ಜೀವ ಜಂತುಗಳು ಬೇಗನೆ ಸ್ಪಂದಿಸುತ್ತವೆ. ಪ್ರತಿರೋಧವೊಡ್ಡದೆ, ಬಂದಿರುವ ಬದಲಾವಣೆಯನ್ನು ಬರಮಾಡಿಕೊಳ್ಳುತ್ತವೆ.

ಮಾನವನ ಬದುಕಿನಲ್ಲೂ ಎಲ್ಲವೂ ಒಂದೇ ಸಮನಾಗಿ ಇರುವುದಿಲ್ಲವಷ್ಟೇ. ಹವಾಮಾನ ಬದಲಾವಣೆಯಂತೆ, ತನ್ನ ಸುತ್ತಮುತ್ತಲಿನಲ್ಲಿ ಯಾರ್ಯಾರು ಇರುತ್ತಾರೆ, ಅವರ ನಡವಳಿಕೆಗಳೇನು, ಅವರಿಗಿರುವ ಅಭಿಪ್ರಾಯವೇನು ಎಂಬುದೆಲ್ಲವೂ ಬದಲಾಗುತ್ತ ಹೋಗಬಹುದು. ಹಿಂದೆಂದೋ ಕೇಳಿದ ಒಂದು ಕಥೆಯ ಬಗ್ಗೆ ಹೊಸದೊಂದು ಅರ್ಥ ಸಿಗಬಹುದು. ಹಿಂದೆ ತಪ್ಪು ಎಂದುಕೊಂಡದ್ದು, ಈಗ ಸರಿ ಎನಿಸಬಹುದು. ಸರಿ ಎಂದುಕೊಂಡದ್ದು ತಪ್ಪೆಂದು ತಿಳಿಯಬಹುದು. ಒಬ್ಬರ ನಡವಳಿಕೆಯ ರೀತಿಗೆ ಕಾರಣವೇನೆಂದು ಗೊತ್ತಾಗಬಹುದು. ಇವೆಲ್ಲವೂ ನಾವೆಷ್ಟು ಜಗತ್ತಿಗೆ ತೆರೆದುಕೊಳ್ಳುತ್ತೇವೆ ಎನ್ನುವುದರ ಮೇಲೆ ಅವಲಂಬಿಸಿರುತ್ತದೆ.

ಮನುಜನು, ರಾಗ-ದ್ವೇಷ, ಪ್ರೀತಿ, ಮಮಕಾರ ಇತ್ಯಾದಿ ಭಾವನಾತ್ಮಕವಾದ ಬಂಧಗಳಿಂದ ಪೂರ್ಣಮುಕ್ತನೇನಲ್ಲವಲ್ಲವೇ. ಯಾವುದೋ ಸಂದರ್ಭಾನುಸಾರ ಒಬ್ಬ ವ್ಯಕ್ತಿಯ ಮೇಲೆ, ತತ್ವ ಅಥವಾ ರೀತಿ-ನೀತಿಗಳ ಮೇಲೆ ಒಂದು ನಿರ್ದಿಷ್ಟ ಅಭಿಪ್ರಾಯ ಹೊಂದಿಬಿಡುತ್ತೇವೆ. ಆದರೆ, ಕಾಲವು ನಮ್ಮನ್ನು ಮುಂದೆ ಕರೆದುಕೊಂಡ ಹೋದಾಗಲೆಲ್ಲ, ಸರಿ-ತಪ್ಪನ್ನು ಅವಲೋಕಿಸದೆ, "ಇಲ್ಲ ನಾನು ನನ್ನ ಆ ಹಳೇ ಅಭಿಪ್ರಾಯಕ್ಕೇ ಜೋತು ಬೀಳುತ್ತೇನೆ" ಎಂದು ಹಠ ಹಿಡಿದರೆ ನಮ್ಮದೇ ಚೌಕಟ್ಟಿನೊಳಗೆ ಬಂಧಿಗಳಾಗುತ್ತೇವೆ. ಮತ್ತು ಪ್ರಕೃತಿಯ ಬದಲಾವಣೆಗಳಿಗೆ ಸ್ಪಂದಿಸದ ಜಡವಸ್ತುಗಳಾಗುತ್ತೇವೆ. ಸ್ಥಾವರಕ್ಕಷ್ಟೇ ಅಳಿವು, ಬರುವುದನ್ನು ಅಪ್ಪಿ, ಮುಂದೆ ಸಾಗುವವರಿಗೆ ಎಲ್ಲವೂ ಹೊಸತೇ. ಅಳಿವಿನ ಮಾತೇ ಇರುವುದಿಲ್ಲ ಎಂಬುದನ್ನು ನಾವು ಜ್ಞಾಪಿಸಿಕೊಳ್ಳಬೇಕಷ್ಟೇ!

ಏಪ್ರಿಲ್ ಮಾಹೆಯು, ನಗೆಹಬ್ಬಕ್ಕೆ ಪರ್ಯಾಯವೇನೋ ಅನ್ನುವಷ್ಟು ಪ್ರಖ್ಯಾತಿಯಾದ ತಿಂಗಳು. ಮೂರ್ಖರ ದಿನಾಚರಣೆಯೊಂದಿಗೆ ಪ್ರಾರಂಭವಾಗುವ ಏಪ್ರಿಲಿನಲ್ಲಿ, ನಾವೆಲ್ಲರೂ ಜಗತ್ತಿಗೆ ಮತ್ತಷ್ಟು ತೆರೆದುಕೊಳ್ಳುತ್ತಾ, ನಗೋಣ, ನಗಿಸೋಣ, ನಗುತ್ತ ಸಾಗೋಣ. ▪

ಎರಡು ತಿಂಗಳ ಪ್ರಮುಖ ದಿನಗಳು

ಏಪ್ರಿಲ್ ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ/ವೈಶಾಖ ಮಾಸ

02 ಗು - ಮಹಾವೀರ ಜಯಂತಿ
03 ಶು - ಗುಡ್ ಫ್ರೈಡೆ, 04 ಶ - ಹೋಲಿ ಸಾಟರ್ಡೇ,
05 ಭಾ - ಈಸ್ಟರ್ ಸಂಡೇ
07 ಮಂ - ಸಂಕಷ್ಟ ಚತುರ್ಥಿ
14 ಮಂ - ಸೌರ ಯುಗಾದಿ, ಡಾ ಅಂಬೇಡ್ಕರ್ ಜಯಂತಿ
15 ಬು - ವರೂಥಿನಿ ಏಕಾದಶಿ, 18 ಶ - ಅಕ್ಷಯತದಿಗೆ ಅಮಾವಾಸ್ಯೆ
19 ಭಾ - ವೈಷಾಖ ಮಾಸ ಆರಂಭ
21 ಮಂ - ಅಕ್ಷಯ ತದಿಗೆ, ಬಸವ ಜಯಂತಿ, 23 ಗು - ಶಂಕರ ಜಯಂತಿ
24 ಶು - ರಾಮಾನುಜಾಚಾರ್ಯರ ಜಯಂತಿ
29 ಬು - ಮೋಹಿನೀ ಏಕಾದಶಿ

ಮೇ ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ, ವಸಂತ/ಗ್ರೀಷ್ಮ ಋತು, ವೈಶಾಖ/ಜ್ಯೇಷ್ಠ ಮಾಸ

01 ಶು - ಕಾರ್ಮಿಕರ ದಿನಾಚರಣೆ
02 ಶ - ನೃಸಿಂಹ ಜಯಂತಿ
03/04 ಹುಣ್ಣಿಮೆ/ಬುದ್ಧ ಪೂರ್ಣಿಮಾ
07 ಗು - ಸಂಕಷ್ಟ ಚತುರ್ಥಿ
10 ಭಾ - ಮದರ್ಸ್ ಡೇ
14 ಗು - ಅಪರಾ ಏಕಾದಶಿ
17 ಭಾ - ಬಾದಾಮಿ ಅಮಾವಾಸ್ಯೆ
18 ಸೋ - ಸೋಮವತೀ ಅಮಾವಾಸ್ಯೆ
19 ಮಂ - ಜ್ಯೇಷ್ಠ ಮಾಸ ಆರಂಭ
29 ಶು - ನಿರ್ಮಲಾ ಏಕಾದಶಿ

ಏಪ್ರಿಲ್ ಒಂದೇ ಆಗಬೇಕಾ ?

ಕನಕಾಪುರ ನಾರಾಯಣ

ನಾವೆಲ್ಲರೂ ಜೀವನದಲ್ಲಿ ಎಂದಾದರೂ ಒಮ್ಮೆ ದೊಡ್ಡದಾಗಲ್ಲದಿದ್ದರೂ ಸಣ್ಣ ಪುಟ್ಟ ಪ್ರಮಾಣದಲ್ಲಿ ಕನಿಷ್ಟ ಹಣೆ ಚಚ್ಚಿಕೊಳ್ಳುವಷ್ಟಾದರೂ ಮೂರ್ಖರಾಗಿರುತ್ತೇವೆ ಅಥವಾ ಜೀವನ ಪರ್ಯಂತ ನೆನೆಸಿಕೊಳ್ಳುವ ಘಳಿಗೆ ಎಂದು ಮೆದುಳಿನ ಮೂಲೆಯಲ್ಲಿ ಸದಾ ಕೊರೆಯುವಂತೆ ಮಾಡಿರುತ್ತೇವೆ. ನಾವು ಫೂಲ್ ಆಗುವುದಿರಲಿ, ಬೇರೆಯವರನ್ನು ಫೂಲ್ ಮಾಡಲಿಕ್ಕೆ ಹೋಗಿ ನಾವೇ ಫೂಲ್ ಆಗುವುದು ಇನ್ನೂ ತಮಾಷೆ.ಸುಮ್ಮನೆ ನಮ್ಮ ಪೆದ್ದುತನಕ್ಕೆ ನಾವೇ ನಕ್ಕು ಸರಿಮಾಡಿಕೊಂಡರೆ ಒಳ್ಳೆಯದೇ ಹೊರತು ಮುಯ್ಯಿ ತೀರಿಸಿಕೊಳ್ಳಲು ಮುಂದಾದರೆ ಮತ್ತೂ ಮೂರ್ಖತನವೇ ಸರಿ.

ಈ ಮೂರ್ಖರ ದಿನಾಚರಣೆ ಆಚರಣೆ ಶುರುವಾದ ದಿನ ಸ್ಥಳಕ್ಕೆ ನಿಖರವಾದ ಮಾಹಿತಿ ಇಲ್ಲದಿದ್ದರೂ ಮಕ್ಕಳಿದ್ದಾಗ ನಾವೆಲ್ಲಾ ಗೆಳೆಯರು ಅಥವಾ ಯಾರನ್ನಾದರೂ ಫೂಲ್ ಮಾಡಿರುವ ನೆನಪು ಮಾಡಿಕೊಂಡರೆ ಈಗ ಛೆ! ಎಷ್ಟು silly ಅಂತೆನಿಸುತ್ತದೆ." ಮನೆಗೆ ಯಾರೋ ನಂಟರು ಬಂದಿದ್ದಾರೆ" ಅಂತ ಹೇಳಿ ಹೆಂಡತಿ ತನ್ನ ಮನೆಯವರನ್ನ ಆಫೀಸಿನಿಂದ ವಾಪಸ್ ಕರೆಸಿ, ಅಂಗಡಿಲಿ ಸೇಲ್ ಹಾಕಿರುವ ಸುಳ್ಳು ಸುದ್ದಿ ಹೇಳಿದ್ದು, ಪುಟ್ಟ ಮಕ್ಕಳಿದ್ದಾಗ ನಿನ್ ಬಟ್ಟೆ ಮೇಲೆ ಜಿರಳೆ ಇದೆ ನೋಡು ಎಂದು ಹೇಳಿ ಫೂಲ್ ಮಾಡಿದ ಸಂಗತಿ, ಬೆಂಕಿ ಬಿದ್ದ ಸುದ್ದಿ ಕೇಳಿ ಅಗ್ನಿ ಶಾಮಕ ದಳ ಧಾವಿಸಿದ್ದ ಸಂಗತಿ, ನಿಮ್ಮಾಕೆಗೆ ಮಗು ಆಯ್ತು ಎಂದು ಹೇಳಿ ಹುಟ್ಟಿನಿಂದ ಸಾವಿನವರೆಗೂ ಸುಳ್ಳು ಸುದ್ದಿ ಹೇಳಿ ಗಾಬರಿ ಮಾಡಿದ ಸಂಗತಿಗಳೂ ಕೇಳಿದ್ದೇವೆ.

ಆ ಪರಂಪರೆ ಸಾಮಾನ್ಯ ಜನರಲ್ಲಿ ಈಗ ಕ್ಷೀಣಿಸುತ್ತಿದೆ ಅಂತನಿಸಬಹುದಾದರೂ ಪ್ರಪಂಚದ ದೊಡ್ಡ ದೊಡ್ಡ ಸಂಸ್ಥೆಗಳು / ಕಂಪನಿಗಳು ಹಿಂದಿನಿಂದ ಈವರೆಗೂ ಜನರನ್ನು ಫೂಲ್ ಮಾಡುತ್ತಾ ಬಂದಿವೆ.ಅಂಥಾ ಬೇಕಾದಷ್ಟು ಉದಾಹರಣೆ ಗೂಗಲ್ ನಲ್ಲಿ ಸಿಗುತ್ತವೆ, ಹುಡುಕಿ ಬೆರಳೆಣಿಕೆಯಷ್ಟು ಮಾತ್ರ ಇಲ್ಲಿವೆ. ಅವೆಲ್ಲದರ ಅಡಿಯಲ್ಲಿ ಒಟ್ಟಾರೆ ಅನಿಸಿಕೆ ಹೇಳಿರುವುದನ್ನು ಓದಲು ಮರೆಯದಿರಿ !

☺ 1915 ರಲ್ಲಿ ಬ್ರಿಟೀಶ್ ಪೈಲೆಟ್ ಒಬ್ಬ ಜರ್ಮನಿ ಆಕ್ರಮಿಸಿದ್ದ ವಿಮಾನ ನಿಲ್ದಾಣದ ಮೇಲೆ ದೊಡ್ಡ ಬಾಂಬ್ ಒಂದನ್ನು ಎಸೆದ, ಜರ್ಮನ್ ಸೈನಿಕರು ಚಲ್ಲಾಪಿಲ್ಲಿಯಾಗಿ ಚದುರಿ ಹೋದರು.ಆದರೆ ಬಾಂಬ್ ಸಿಡಿಯಲಿಲ್ಲ, ಆನಂತರ ನೋಡಿದರೆ ಅದೊಂದು ಫುಟ್ಬಾಲ್ ಚೆಂಡು ಅದರ ಮೇಲೆ "ಏಪ್ರಿಲ್ ಫೂಲ್ Gott Strafe England! " ಎಂದು. ಸೂಚನೆ Gott Strafe England ಅಂದರೆ "ಓ ದೇವರೆ ಇಂಗ್ಲೆಡನ್ನು ಶಿಕ್ಷಿಸು". ಹೀಗೆಂದು ಜರ್ಮನ್ ಸೈನಿಕರು ಘೋಷಣೆ ಮಾಡುತ್ತಿದ್ದರು

☺ 1965 ರಲ್ಲಿ ಬಿ ಬಿ ಸಿ ದೂರದರ್ಶನದವರು ಲಂಡನ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಒಬ್ಬನನ್ನು ಸಂದರ್ಶನ ಮಾಡುತ್ತಾ "Smellovision" ಎಂಬ ಒಂದು ಹೊಸ ತಂತ್ರಜ್ಞಾನ ಕಂಡು ಹಿಡಿಯಲಾಗಿದೆ ಅದರಿಂದಾಗಿ ತಮ್ಮ ಟಿ ವಿ ಪರದೆಯಮೇಲೆ ಮೂಸಿದರೆ ವಾಸನೆ ಗ್ರಹಿಸಬಹುದು ಎಂದು ಯಂತ್ರದ ಹಿಂದೆ ಕಾಫಿ ಬೀಜ ಮತ್ತು ಈರುಳ್ಳಿ ಇಟ್ಟನು.ನೇರ ಪ್ರಸಾರದಲ್ಲಿ ಜನರನ್ನು ವಾಸನೆ ಬರುತ್ತಿದೆಯೇ ಎಂದು ಪ್ರಶ್ನಿಸಿದನು, ಕೆಲವರು ಈರುಳ್ಳಿಯನ್ನು ವಾಸನೆ ನೋಡಲು ಹೋಗಿ ಕಣ್ಣಲ್ಲಿ ನೀರು ಬಂದಿತು ಎಂದರು, ಏನ್ ಹೇಳ್ತೀರಾ ಇವರಿಗೆ

☺1949 ರಲ್ಲಿ Frankfurt ನ ಮೃಗಾಲಯದಲ್ಲಿ ಬಿಳಿ ಆನೆ ಬರ್ಮಾ ದಿಂದ ತರಲಾಗಿದೆ ಎಂದು ಪ್ರಚಾರ ಮಾಡಿದರು ಪಾಪ ಜನ ನೂಕು ನುಗ್ಗಲು, ಮಾರನೇ ದಿನ ಅದು ಬಿಳಿಯಲ್ಲ ಬೂದುಬಣ್ಣದ್ದೇ ಎಂದು ನಿಜ ತಿಳಿದು ನಿರಾಶರಾದ ಜನ ಕೋಪ ಮಾಡಿಕೊಳ್ಳಲಿಲ್ಲ. ಮೃಗಾಲಯದ ನಿರ್ದೇಶಕ Berhard Grzimek ಜನರನ್ನು ಫೂಲ್ ಮಾಡಿದ್ದ. ಕಾರಣ ಆತ ಜರ್ಮನಿ ಯುದ್ಧದಲ್ಲಿ ಪ್ರಾಣಿಗಳನ್ನು ರಕ್ಷಿಸಿದ್ದ.

☺ ವರ್ಷ 2000 ವಾರ್ತಾ ಗೋಷ್ಠಿ ಊರೆಲ್ಲಾ ಹಬ್ಬಿತು. ಏಪ್ರಿಲ್ ಫೂಲ್ ಪ್ರಯುಕ್ತ ಮಧ್ಯಾಹ್ನ 59th Street ನ್ಯೂ ಯಾರ್ಕ್ ಪಟ್ಟಣ ದಲ್ಲಿ ಒಂದು ಬಹಿರಂಗ ಪೆರೇಡ್ ನಡೆಯುತ್ತದೆ ಎಂದು. CNN FOX ಜೊತೆಯಾದ WNYW ತಮ್ಮ ವಾರ್ತಾ ವರದಿಗಾರರನ್ನೂ ಕಳಿಸಿತು. ಸಂಜೆಯವರೆಗೂ ಕಾದು ಫೂಲ್ ಆದವರು ಅವರು, ಈ ರೀತಿ 1986ರಿಂದ ಒಂದಲ್ಲಾ ಒಂದು ರೀತಿ ಜನರಿಗೆ ಮಂಕು ಬೂದಿ ಎರಚುತ್ತಾ ಬಂದಿದ್ದಾನೆ Joey Skaggs ಎಂಬಾತ.

- 1998 USA ಯಲ್ಲಿ ಎಡಗೈ (left hand) ಬರ್ಗರ್ ಇಂದಿನಿಂದ ಮಾರುಕಟ್ಟೆಗೆ ಬಿಡುಗಡೆ ಎಂದು ಬರ್ಗರ್ ಕಿಂಗ್ ಏಪ್ರಿಲ್ ೧ ರಂದು ಹೇಳಿತು. ಜನ ನೂಕು ನುಗ್ಗಲಾಗಿ ಬಂದು ಸುತ್ತೂ ತಿರುಗಿಸಿ ನೋಡಿ ಫೂಲ್ ಆದದ್ದೂ ಉಂಟು.

- 1978 ರಲ್ಲಿ ಸಿಡ್ನಿಯ ಅಪೇರಾ ಹೌಸ್ ಬಳಿ ದೊಡ್ಡ ಮಂಜುಗಡ್ಡೆಯ ಬಂಡೆ ಅಂಟಾರ್ಟಿಕಾದಿಂದ ತೇಲಿ ಬಂದಿದೆ ಎಂದು ಪ್ರಕಟಮಾಡಿದವರು ಖ್ಯಾತ ವ್ಯಾಪಾರಿ ಡಿಕ್ ಸ್ಮಿತ್. ರೇಡಿಯೋಗಳಲ್ಲಿ ನಿಮಿಷ-ನಿಮಿಷದ ವರದಿ, ಈ ಮಂಜುಗಡ್ಡೆಯ ಚೂರನ್ನು ಹತ್ತು ಸೆಂಟಿಗೆ ಮಾರಲಾಗುವುದು ಎಂದು ಜಾಹಿರಾತು ಕೊಟ್ಟರು.ಮರುದಿನ ಮಳೆಯ ಕಾರಣ ಅದರ ಬಣ್ಣ ಬಯಲಾಯಿತು...ಡಿಕ್ ಸ್ಮಿತ್ತೇ ಫೂಲ್ ಆದರು, ಜನ ಹೋ ಎಂದು ಕೂಗಿದರೂ.. ನಕ್ಕು ಮನೆಗೆ ವಾಪಸಾದರು

- ಆದರೆ ಗೂಗಲ್ ಸಂಸ್ಥೆ GMAIL ಆರಂಭಿಸಿದ್ದು ಏಪ್ರಿಲ್ ಒಂದಕ್ಕೇ, ಹೌದು. ಬಿ ಬಿ ಸಿ ಇದು ಪೊಳ್ಳು ಸುದ್ದಿ ಎಂದು ತಿಳಿಯಿತು ಆದರೆ ಅಪಾರ ಪ್ರಚಾರ ಅದನ್ನು ಇನ್ನೂ ಹೆಚ್ಚು ಪ್ರಸಿದ್ಧಿ ಮಾಡಿತು. ಆದರೆ ಗೂಗಲ್ ಇತ್ತೀಚೆಗೆ "ಮೂಸಿ ನಂಬಿರಿ" ಎಂದು ಜನರಿಗೆ ತಮ್ಮ ಕಂಪ್ಯೂಟರ್ ಪರದೆಯಮೇಲೆ ವಾಸನೆ ಬರುತ್ತದೆ ಎಂದು ದೊಡ್ಡ ಮೂರ್ಖರನ್ನಾಗಿ ಮಾಡಿತ್ತು. ಅದನ್ನು ನೋಡಲು ಇಲ್ಲಿ ಕ್ಲಿಕ್ಕಿಸಿ http://www.google.com/landing/nose/

- ಚಲನ ಚಿತ್ರಕಾರ ಚಾಯಾಚಿತ್ರಗಾರ Terry Jones ಹಾರುವ ಪೆಂಗ್ವಿ ನೋಡಲು ಇಲ್ಲಿ ಕ್ಲಿಕ್ ಮಾಡಿ https://www.youtube.com/watch?v=23qDl1aH9l4

- ಸ್ವಿಜರ್ ಲ್ಯಾಂಡ್ ಪರ್ವತ ಶುಚಿಮಾಡುವವರ ಏಪ್ರಿಲ್ ಫೂಲ್ ವಿಡಿಯೋ ನೋಡಲು ಇಲ್ಲಿ ಕ್ಲಿಕ್ ಮಾಡಿ https://www.youtube.com/watch?v=aKIqGYRuvbk

ಇನ್ನು ನಿಜಜೀವನದಲ್ಲಿ ರಾಜಕಾರಣಿಗಳು ಭರವಸೆಕೊಟ್ಟು ಕೈಕೊಟ್ಟರೆ, ಮಮತೆಯಿಂದ ಬೆಳೆಸಿದ ಮಕ್ಕಳೇ ತಂದೆತಾಯಿಯರನ್ನು ಕೈಬಿಟ್ಟರೆ, ಮದುವೆಗೆ ಮುನ್ನ ಕಂಡ ಕನಸು, ಕೊಟ್ಟ ಮಾತು ನುಚ್ಚು ನೂರಾದರೆ ಅದೂ ಫೂಲ್ ಆದಂತೆ ಅಲ್ಲವೇ. ಅಲ್ಲಿ ಇಲ್ಲಿ ಮೂರು ಕಾಸು ಉಳಿಸಿ ಬೇರೆ ಎಲ್ಲೋ ಆರು ಕಾಸು ಕಳೆದುಕೊಳ್ಳುವುದಕ್ಕೆ ಏಪ್ರಿಲ್ ಒಂದೇ ಆಗಬೇಕಾ ? ▪

1987 ರಲ್ಲಿ ಪತ್ರಿಕೆಯೊಂದರಲ್ಲಿ ಮಾರ್ಗ್ರೇಟ್ ಥಾಚರ್ ಮತ್ತು ಗೋರ್ಬಚೋವ್ ನಡುವೆ ರೋಮಾನ್ಸ್ ನಡೆಯಿತು ಎನ್ನುವ ಸುಳ್ಳು ಸುದ್ದಿ ಈ ಪೊಳ್ಳು ಚಿತ್ರ ಎಲ್ಲೆಡೆ ಹರಡಿತ್ತು.

ಕ್ಷಮಾ ಗುಣ

ನರಸ್ಯ ರೂಪಂ ರೂಪಸ್ಯಾಭರಣಂ ಗುಣಾಃ
ಗುಣಸ್ಯಾಭರಣಂ ಜ್ಞಾನಂ ಜ್ಞಾನಸ್ಯಾಭರಣಂ ಕ್ಷಮಾ

ಇದರ ಅರ್ಥ?!

ಮನುಷ್ಯನಿಗೆ ರೂಪವೇ ಆಭರಣ, ರೂಪಕ್ಕೆ ಗುಣಗಳೇ ಆಭರಣ
ಗುಣಗಳಿಗೆ ಜ್ಞಾನವೇ ಆಭರಣ, ಜ್ಞಾನಕ್ಕೆ ಕ್ಷಮಾ ಗುಣವೇ ಆಭರಣ

ಈ ಮೇಲಿನ ಶ್ಲೋಕ ಶುಭಾಷಿತ ಮಂಜರಿಯಿಂದ ಆಯ್ದದ್ದು. ಒಬ್ಬ ವ್ಯಕ್ತಿಯಲ್ಲಿ ಒಳ್ಳೆಯ ರೂಪ, ಸತ್ ಚಾರಿತ್ಯ, ಜ್ಞಾನ ಮತ್ತು ಜೊತೆಗೆ ಕ್ಷಮಾ ಎಂಬ ಅತ್ಯುತ್ತಮ ಗುಣ ಸೇರಿದರೆ ಅವನು ದೇವಮಾನವನಾಗುವುದರಲ್ಲಿ ಸಂದೇಹವಿಲ್ಲ.

'ಕ್ಷಮಯಾ ಧರಿತ್ರಿ' ಎಂದರೆ ಭೂಮಿಯಂತೆ ಕ್ಷಮಿಸುವ ಗುಣ ಇರುವವಳು ಎಂದು ಅರ್ಥ. ಇಲ್ಲಿ ಸ್ತ್ರೀಲಿಂಗ ಉದ್ದೇಶಪೂರ್ವಕವಾಗಿಯೇ ಉಪಯೋಗಿಸಿದ್ದಾರೆ. ಏಕೆಂದರೆ ಭೂಮಿ ಎನ್ನುವುದು ಸ್ತ್ರೀಲಿಂಗ ಪದ ಮತ್ತು ಕ್ಷಮಾ ಗುಣವು ಸ್ತ್ರೀಯರಲ್ಲಿ ಹೆಚ್ಚು ಎನ್ನುವುದು ಲೋಕೋಕ್ತಿ. ಜೊತೆಗೆ, ಎಲ್ಲರಲ್ಲೂ ಇರಬೇಕಾಗಿರುವ ಆರು ಉತ್ತಮ ಗುಣಗಳಲ್ಲಿ ಒಂದು. ಆ ಅತ್ಯುತ್ತಮ ಗುಣವಾದ ಕ್ಷಮಾ ಧಾರಣೆ ಮಾಡುವುದು ಅಷ್ಟು ಸುಲಭಸಾಧ್ಯವಲ್ಲ.

ಭೂಮಿ ಈ ಗುಣಕ್ಕೆ ಸರಿಯಾದ ಉದಾಹರಣೆ. ನಾವಿರುವ ಭೂಮಿ ಕೂಡ ಬೆಂಕಿಯಂತೆ ಸಮವರ್ತಿ. ಬೆಂಕಿ ತನ್ನಲ್ಲಿ ಬಂದ ಎಲ್ಲವನ್ನು ಸುಡುತ್ತದೆ. ಭೂಮಿಯು ಹಾಗೆ, ತನ್ನ ಮೇಲೆ ಗಂಜಲವನ್ನು ಸುರಿದರೂ ಸರಿಯೇ ಅಥವಾ ಗಂಧವನ್ನು ಸುರಿದರೂ ಸರಿಯೇ ಅದು ಸಮಾನವಾಗಿ ಸ್ವೀಕಾರ ಮಾಡುತ್ತದೆ ಮತ್ತು ತನ್ನಲ್ಲಿ ಹೀರಿಕೊಳ್ಳುತ್ತದೆ.

ಶ್ರೀಯುತ ಜಿ.ಪಿ. ರಾಜರತ್ನಂ ರವರು ಕ್ಷಮಯಾ ಗುಣದ ಬಗ್ಗೆ ಚೆನ್ನಾದ ವಿವರಣೆ ಕೊಟ್ಟಿದ್ದಾರೆ. ಈ ಕೆಳಗೆ ಕೊಟ್ಟಿರುವ ವಿಷಯಗಳು ಅವರ 'ವಿಚಾರ ರಶ್ಮಿ' ಯಿಂದ ಆಯ್ದದ್ದು.

ಸೀತೆ ಭೂಮಿಯ ಮಗಳು. ರಾವಣ ಹತನಾದ ಮೇಲೆ ಸೀತೆಯನ್ನು ಕಾಣಲು ಹನುಮಂತ ಅಶೋಕವನಕ್ಕೆ ಭೇಟಿಯಿತ್ತ. 'ತಾಯಿ, ನಿನಗೆ ವಿಧ ವಿಧವಾಗಿ ಕಾಡಿಸಿದ ಆ ರಾಕ್ಷಸ ಸ್ತ್ರೀಯರನ್ನು ಕೊಂದು ಬರುತ್ತೇನೆ, ದಯವಿಟ್ಟು ಅಪ್ಪಣೆ ಕೊಡು' ಎಂದು ಕೇಳಿದ. ಈ ಮಾತುಗಳನ್ನು ಕೇಳಿದ ಸೀತೆ,

'ಹನುಮಂತ, ನೀನು ಹಾಗೆ ಮಾಡುವುದು ತಪ್ಪು. 'ನ ಕಶ್ಚಿನ್ನಾಪರಾಧ್ಯತಿ' 'ಯಾರೂ ಏನೂ ತಪ್ಪು ಮಾಡುವುದಿಲ್ಲವೇನು? ಅಷ್ಟಕ್ಕೂ, ಅವರು ರಾವಣನ ಆಜ್ಞೆಯಂತೆ ನಡೆದುಕೊಂಡಿದ್ದಾರೆ. ಅವರಲ್ಲಿ ತಪ್ಪಿದೆ ಎಂದು ನನಗೆ ಕಾಣುವುದಿಲ್ಲ' ಎಂದಳು. ತಾಯಿಯ ಗುಣವನ್ನು ಪಡೆದ ಮಗಳು ಸೀತೆ. ನೂಲಿನಂತೆ ಸೀರೆ, ತಾಯಿಯಂತೆ ಮಗಳು!

ಬುದ್ಧ ತಾನು ಬುದ್ಧನಾಗುವುದಕ್ಕೆ ಮುಂಚೆ ಬೆಳೆಸಿಕೊಂಡ ಅನೇಕ ಗುಣಗಳಲ್ಲಿ ಕ್ಷಮೆಯೂ ಒಂದು.

ಬುದ್ಧ ತನ್ನ ಹಿಂದಿನ ಜನ್ಮದಲ್ಲಿ ಕಾಡುಕೋಣವಾಗಿ ಹುಟ್ಟಿ, ಹಿಮಾಲಯದ ತಪ್ಪಲಲ್ಲಿ ಒಂದು ಮಹಾವೃಕ್ಷದ ನೆರಳಲ್ಲಿ ವಾಸವಾಗಿದ್ದ. ಕಾಡುಕೋಣ ಭಯಂಕರವಾಗಿತ್ತು ಆದರೆ ಅದರ ಸ್ವಭಾವ ಸಾಧುವಾಗಿತ್ತು. ಅದು ಸಾಧು ಎಂದು ಕಂಡುಕೊಂಡ ಒಂದು ಕೋತಿ, ಅದರ ಮೇಲೆ ಕುಣಿದು ಕುಪ್ಪಳಿಸಿ ಬಹಳ ತೊಂದರೆ ಕೊಡುತಿತ್ತು. ಕೋತಿ ಏನೇ ಮಾಡಿದರು ಆ ಕೋಣ ಸಹಿಸಿಕೊಂಡಿತ್ತು. ಒಂದು ಸಲ ಆ ಕೋತಿ ಇನ್ನ್ಯಾವುದೋ ಕೋಣದ ಮೇಲೆ ಕುಣಿದು ಪ್ರಾಣ ಕಳೆದುಕೊಂಡಿತು. ಕ್ಷಮಾಗುಣದ ಕೋಣ ಉತ್ತಮಗತಿಯನ್ನು ಪಡೆಯಿತು.

ಸುಖ ದುಃಖಗಳನ್ನು ಸಮಾನವಾಗಿ ಸ್ವೀಕರಿಸಬೇಕು ಮತ್ತು ಕ್ಷಮಾಗುಣಗಳನ್ನು ಬೆಳೆಸಿಕೊಳ್ಳಬೇಕು ಎಂಬುದನ್ನು ಎಲ್ಲ ಧರ್ಮಗಳು ತಿಳಿಸುತ್ತವೆ. ಆದರೆ, ನಾವು ಈ ಮಹತ್ ಗುಣಗಳನ್ನು ನಮ್ಮಲ್ಲಿ ಧಾರಣೆ ಮಾಡಿಕೊಂಡಾಗಲೇ ಅದರ ಬಲ ತಿಳಿಯುವುದು. ಕ್ಷಮಾಗುಣವನ್ನು ಬೆಳೆಸಿಕೊಂಡು ಬಲಶಾಲಿಯಾದ ವ್ಯಕ್ತಿಗಳು ಜಗತ್ತಿನಲ್ಲಿ ಬಹಳ. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಕೆಮ್ಮಾಯಣ

ಖೊಖ್ಖೊಖ್ಖೊಖ್ಖೊಖ್ಖೊ....

ಕೆಮ್ಮೋ ಕೆಮ್ಮು. ಬಾಗಿಲು ತೆಗೆದೆ. ಸೀನು ಕೇಮೇ ಕೇಮು.

'ಯಾಕೋ ಇಷ್ಟೊಂದು ಕೆಮ್ತಾ ಇದ್ದೀಯಾ?'

'ದಿಲ್ಲಿಯಿಂದ ಒಬ್ಬ ಕೆಮ್ಮಿಲ್ಲೆ ಬಂದಿದ್ನಲ್ಲಾ...'

'ಅದು ಕೆಮ್ಮಿಲ್ಲೆ ಅಲ್ಲ, ಎಮ್ಮೆಲ್ಲೆ'

'ಬಂದಾಗಿಂದ ಹೋಗೋವರೆಗೂ ಕೆಮ್ಮಿದ್ರಿಂದ ಕೆಮ್ಮೆಲ್ಲೆ. ಅವನ ಕಾರಿನಲ್ಲಿ ಕೂತು ನನಗೂ ವಕ್ಕಿಸ್ಕೊಳ್ತು. ಖೊಖ್ಖೊಖ್ಖೊ...'

'ಔಷಧಿ?'

'ಆ ಕೆಮ್ಮಿಲ್ಲೆ ಜಿನ್‌ಗೆ ದಾಲ್ ಸೇರಿಸಿಕೊಂಡು ತೊಗೊಂಡ್ರೆ ಹೋಗತ್ತೆ ಅಂದ. ಒಂದು ಕ್ವಾರ್ಟರ್ ಸೂಪರ್ ಕ್ವಾಲಿಟಿ ಜಿನ್‌ಗೆ ಒಂದು ಪ್ಲೇಟ್ ದಾಲ್ ಸೇರಿಸಿಕೊಂಡು ಕುಡಿದೆ.'

'ಬಿಡ್ಬೇಡ ಬುರುಡೆ. ಜಿಂದಾಲ್ ಅನ್ನೋದು ಜಾಗ ಅಂತ ಗೊತ್ತಿಲ್ಲವ ನಿನಗೆ? ಕುಡುಕನಿಗೊಂದು ಪಿಳ್ಳೆ ನೆವ!' ಗದರಿದೆ.

'ಬಿಡು. ಸರ್ವರೋಗಕ್ಕೂ ಸಾರಾಯಿ ಮದ್ದು ಅಂತಾರಲ್ಲ. ಆದ್ದರಿಂದ ಟ್ರೈ ಮಾಡಿದೆ.'

'ಪರಿಣಾಮ?'

'ಮೊದಲು ಎಲ್ಕೆಜಿ ಲೆವೆಲ್‌ನಲ್ಲಿದ್ದ ಕೆಮ್ಮು ಹೈಸ್ಕೂಲ್ ಲೆವೆಲ್‌ಗೆ ಬಂತು. ತಕ್ಷಣ ದಾಲ್ ತೊಗೊಳ್ಳೋದನ್ನ ಬಿಟ್ಬಿಟ್ಟೆ.'

'ಜಿನ್ನು?'

'ಇದೆ ಇನ್ನೂ'

'ಸೀನು... ಕೆಮ್ಮಿದ್ದಾಗ ಕುಡಿದ್ರೆ ಯೂ ವಿಲ್ ಬಿಕಮ್ ಅನ್‌ಸೀನು. ಹೋಗ್ಬಿಡ್ತೀಯ ಅಷ್ಟೆ.'

'ನನಗೇನು ಬುದ್ಧಿ ಇಲ್ವಾ... ಕೆಮ್ಮಿದ್ದಾಗ ಕುಡಿಯಲ್ಲ.'

'ಗುಡ್.'

'ಕೆಮ್ಮಿ ಆದ ತಕ್ಷಣ ಕುಡೀತೀನಿ, ಮತ್ತೆ ಕೆಮ್ಮು ಬಂದಾಗ ನಿಲ್ಲಿಸ್ತೀನಿ. ಒಳ್ಳೆ ಜಿನ್ ಕೆಮ್ತಾ ಕೆಮ್ತಾ ಕುಡಿದ್ರೆ ಚೆಲ್ಲಿ ವೇಸ್ಟ್ ಆಗತ್ತೆ.'

'ನೀನು ಈ ಕ್ಷಣದಿಂದ ಕುಡಿಯೋದನ್ನ ಬಿಡಬೇಕು.'

ಸೀನುವಿನ ಕಣ್ಣಿನಲ್ಲಿ ಗಂಗಾಭವಾನಿ!

'ಏಯ್ ಡೇಸ್ ಆಯ್ತು ಗೊತ್ತಾ ಜಿನ್ ತೊಗೊಂಡು. ನನ್ಹೆಂಡ್ತಿ ಮಡಿಕೋಲಿನ ತರಹ ಬೆಳೆದಿರೋ ನನ್ನ ಮಗನ ಕೈಗೆ ಕೊಟ್ಟು ಮೇಲಿನ ಬಡುವಿನಲ್ಲಿ ಇಡಿಸ್ಬಿಟ್ಟಿದಾಳೆ. ಈಗ ಬಾಟಲು ನೋಡಕ್ಕುಂಟು, ಕುಡಿಯಕ್ಕಿಲ್ಲ. ಖೊಖ್ಖೊಖ್ಖೊ....'

ಬೆನ್ನು ನೇವರಿಸಿ, ಸಂತೈಸುತ್ತಾ, 'ಎಂಟು ದಿನದಲ್ಲಿ ಏನೂ ಔಷಧಿ...'

'ಹೇಳ್ತೀನಿ ಕೇಳು. ಮೊದಲು ಕಾಫ್ ಸಿರಪ್ ಕುಡಿದೆ.'

'ಏನಾಯ್ತು?'

'ನನಗೆ ಒಳ್ಳೆ ನಿದ್ದೆ ಬಂತು. ನನ್ನ ಮನೆಯವರಿಗೆಲ್ಲ ನಿದ್ದೆ ಹೋಯ್ತು.'

'ಯಾಕೆ?'

'ಕೆಮ್ಮು, ಗೊರಕೆಗಳ ಜುಗಲ್‌ಬಂದಿ ನಡೆಸ್ತಿದ್ನಂತೆ.'

'ಆಮೇಲೆ?'

'ಕೆಮ್ಮೆಶ್ ಕ್ಲಿನಿಕ್‌ಗೆ ಹೋಗಿದ್ದೆ. ಸಿಗರೇಟ್ ಸೇದ್ತೀರಾ ಅಂತ ಕೇಳಿದ್ರು. 'ಸೇದಕ್ಕೆ ಅದೇನು ಬಾವಿ ನೀರಾ?' ಅಂದೆ. ಖೊಖ್ಖೊಖ್ಖೊ...'

'ತರಳೆ. ಡಾಕ್ಟ್ರೇನಂದ್ರು?'

'ಕೆಮ್ಮು ಗಂಟಲಿನಿಂದ ಬರೋದು. ಆದ್ದರಿಂದ ಇಎನ್‌ಟಿಗೆ ತೋರಿಸಿ ಅಂತ ಡಾ. ಕಂಠೇಶ್ ಹತ್ರ ಕಳಿಸಿದ್ರು.'

'ಆಮೇಲೆ?'

'ಆ ಇಎನ್‌ಟಿ ಗಂಟಲೊಳಗೊಂದು ಕೊಳವೆ ತುರುಕಿ ನನ್ನ ಕತ್ತು ಹಿಸುಕಿದರು. ಕೊಳವೆ ಮುಂಚೇನೇ ಹಾಕ್ದೆ ಇದ್ದಿದ್ರೆ ಇವತ್ತಿಗೆ ನನ್ನ ಏಳನೇ ದಿನದ ಶ್ರಾದ್ಧ ಆಗ್ತಿತ್ತು. ಈ ಕಡೆಯಿಂದ ಒತ್ತಿದ್ದು ಕಂಪ್ಲೀಟ್ ಆಗದೆಯಿರೋಹಾಗೆ ಕೊಳವೆ ತಡೆದಿದ್ದರಿಂದ ಬಚಾವ್!'

ಮುಂದಿನ ಪುಟ ನೋಡಿ ...

‘ಟ್ರೀಟ್‌ಮೆಂಟು?’

‘ನಥಿಂಗು. ಗಂಟಲಲ್ಲಿ ಏನೂ ತೊಂದರೆ ಇಲ್ಲ, ಆರ್ಟ್ ಹೆಕ್ಸ್‌ರೇ ಮಾಡಿಸಿ ಅಂತ ಕಳುಹಿಸಿದ್ರು.’

‘ಗುಡ್ ಡಾಕ್ಟರ್.’

‘ನೀನೇ ಮೆಚ್ಚೇಕು. ಮೂರುಸಾವಿರದ ಆರ್ನೂರು ಡಾಕ್ಟರ್ ಫೀಸ್, ಏಳ್ನೂರು ಕೊಳವೆ ಫೀಸ್, ಇನ್ನೂರು ನರ್ಸ್ ಫೀಸ್. ಅಲ್ಲಿಂದ ಹೊರಗೆ ಬಂದಾಗ ಕೆಮ್ಮಿನ ಜೊತೆ ಗಂಟಲುನೋವೂ ಸೇರಿತ್ತು. ನೋವು ಹೋಗಕ್ಕೆ ಫೋರ್ ಡೇಸ್ ಬೇಕಾಯ್ತು. ಖೊಖ್ಖೊಖ್ಖೊ...’

‘ಆಮೇಲೆ? ಎಕ್ಸ್‌ರೇ ಮಾಡಿಸಿದೆಯಾ?’

‘ಹೂಂ. ಯೂ ಆರ್ ಎ ಹಾರ್ಟ್‌ಲೆಸ್ ಫೆಲೋ ಅಂದ್ರು.’

‘ಸುಳ್ಳು.’

‘ಅವರು ಏನೋ ಹೇಳ್ತಿದ್ರು. ನಾನು ನರ್ಸ್‌ನೇ ನೋಡ್ತಿದ್ದೆ. ಆಗ ‘ಯೂ ಆರ್ ಎ ಹಾರ್ಟ್‌ಲೆಸ್ ಫೆಲೋ’ ಅಂದಿದ್ದು ಕೇಳಿಸ್ತು. ಎಸ್. ನೀನು ಹೇಳಿದ್ದೇ ಸರಿ. ಅದು ಗಂಡು ಧ್ವನಿ. ಡಾಕ್ಟರ್ದಲ್ಲ.’

‘ಡಾಕ್ಟರ್ ಗಂಡಸರಲ್ವಾ?’

‘ಡಾಕ್ಟರ್ ಗಂಡು. ಧ್ವನಿ ಹೆಣ್ಣು.’

‘ಮತ್ತೆ ಆ ಗಂಡು ಧ್ವನಿ?’

‘ನನ್ನ ಹೆಂಡತೀದು. ಕನ್ನಡ ವಿಲನ್ ಸುಂದರ ಕೃಷ್ಣ ಅರಸ್ ಧ್ವನಿ ಇದ್ದಹಾಗಿದೆ ಅವಳದು. ಖೊಖ್ಖೊಖ್ಖೊ...’

‘ಷಟಪ್ ಸೀನು. ಆಕೆಯ ಧ್ವನಿ ನಾನೂ ಕೇಳಿದೀನಿ. ಇಟ್ ಈಸ್ ಸೋ ಮೆಲೋಡಿಯಸ್.’

‘ಪ್ರತಿ ಹೆಣ್ಣಿನ ಧ್ವನೀನೂ ಚೆನ್ನಾಗೇ ಇರತ್ತೆ ಗುರೂ. ಆದರೆ ಗಂಡನನ್ನ ಕಂಟ್ರೋಲ್ ಮಾಡಕ್ಕೆ ಮೆಲೋಡಿ ವರ್ಕ್ ಆಗಲ್ಲ, ನಗಾರೀನೇ ಬೇಕು.’

‘ಯೂ ಆರ್ ರೈಟ್. ನಿಜಕ್ಕೂ ಹಾರ್ಟ್ ಸರ್ಜನ್ ಏನಂದ್ರು ಹೇಳು.’

‘ಸಿಂಪಲ್ ಕಾಫಿಂಗ್ ಕೇಸ್. ಮನೆ ಹತ್ರದ ಫಿಸಿಷಿಯನ್‌ಗೆ ತೋರಿಸಿ ಅಂದ್ರು.’

‘ಫಿಸಿಷಿಯನ್ನು?’

‘ವಾಟರ್ ಪ್ರಾಬ್ಲಂ ಅಂದ್ರು.’

‘ಅಂದ್ರೆ?’

‘ಅವರ ಮನೇಲಿ ಒಂದು ವಾರದಿಂದ ನೀರು ಬಂದಿರಲಿಲ್ಲವಂತೆ. ಆದ್ದರಿಂದ ಸ್ನಾನಕ್ಕೇ ಖೋತಾ. ಸೆಂಟ್ ಹಾಕ್ಕೊಂಡೇ ಇರ್ಬೇಕು ಅಂದ್ರು. ಆ ಸೆಂಟ್ ವಾಸನೆಯಿಂದ ನನ್ನ ಕೆಮ್ಮು ಜಾಸ್ತಿ ಆಯ್ತು. ಖೊಖ್ಖೊಖ್ಖೊ...’

‘ಏಯ್. ನಿನ್ನ ಕೆಮ್ಮಿನ ಬಗ್ಗೆ ಏನಂದ್ರೋ?’

‘ಒಂದು ವಾರದಿಂದ ಕೆಮ್ಮಿ ಕೆಮ್ಮಿ ರಾಗಬದ್ಧವಾಗಿ, ತಾಳಬದ್ಧವಾಗಿ, ಲಯಬದ್ಧವಾಗಿ ಕೆಮ್ತಿದೀರ. ಶಿಳ್ಳೆ ಮೂಲಕ ಹಾಡಿ ಕಚೇರಿ ಕೊಡೋ ಹಾಗೆ ನೀವು ಒಂದು ಕೆಮ್ಮಚೇರಿ ಯಾಕೆ ನಡೆಸ್ಬಾರ್ದು ಅಂದ್ರು.’

‘ಮೆಡಿಸನ್ ಏನ್ಕೊಟ್ರೋ?’

‘ಕೊಡ್ಲಿಲ್ಲ. ನನಗೂ ಒಂದು ತಿಂಗಳಿನಿಂದ ಕೆಮ್ಮು. ನನಗೆ ವಾಸಿಯಾದಾಗ, ಆದರೆ, ಯಾವುದನ್ನ ತೊಗೊಂಡೆ ಅಂತ ನಿಮಗೆ ಫೋನ್ ಮಾಡಿ ಹೇಳ್ತೀನಿ. ನಂಬರ್ ಕೊಟ್ಟು ಹೋಗಿ ಅಂದ್ರು. ಖೊಖ್ಖೊಖ್ಖೊ... ಖೊಖ್ಖೊಖ್ಖೊ... ಖೊಖ್ಖೊಖ್ಖೊ...’

ಕೆಮ್ಮಿನ ಮಹಾಪೂರವೇ ಹರಿಯಿತು.

ಒಳಗೆ ಹೋಗಿ ನೋಡಿದೆ. ಅಕ್ವಾಗಾರ್ಡ್ ನೀರು ಖಾಲಿ ಆಗಿತ್ತು. ಹೊರಗೆ ಸೀನುವಿನ ಕೆಮ್ಮಿನ ಆರ್ಭಟ ಜಾಸ್ತಿ ಆಗಿತ್ತು.

ಕಾರ್ಪೊರೇಷನ್ ನಲ್ಲಿ ತಿರುಗಿಸಿದೆ. ಮೊದಲು ಗಬ್ಬು ವಾಸನೆ, ನಂತರ ನೀರು ಬಂದವು.

ಮನಸ್ಸಿಲ್ಲದ ಮನಸ್ಸಿನಿಂದ ಅದೇ ನೀರನ್ನು ಕೊಟ್ಟೆ. ಸೀನು ಗಟಗಟನೆ ಕುಡಿದ. ಇನ್ನೊಂದು ಲೋಟ ಬೇಕು ಎಂದ. ಒಟ್ಟು ನಾಲ್ಕು ಲೋಟ ಕುಡಿದ.

ಹತ್ತು ನಿಮಿಷ ಆಯಿತು. ಹದಿನೈದು... ಇಪ್ಪತ್ತು.... ಮೂವತ್ತು... ಒಂದು ಗಂಟೆ.

ಊಹೂಂ. ಮಾತಾಡಿದ್ದೂ ಆಡಿದ್ದೇ.

ಆದರೆ...

ಕೆಮ್ಮು?

ಎಲೆಕ್ಷನ್ ನಂತರದ ಎಮ್ಮೆಲ್ಲೆಯಂತೆ ನಾಪತ್ತೆಯಾಗಿತ್ತು.

ಯುರೇಕಾ!

ಮಾಲಿನ್ಯಭರಿತ ಗಾಳಿಯಿಂದ ಬಂದಿದ್ದ ಕೆಮ್ಮಿಗೆ ಮಾಲಿನ್ಯಭರಿತ ನೀರೇ ಔಷಧಿಯಾಗಿ ಪರಿಣಮಿಸಿತ್ತು! ▪

ಸುಮ್ಮೆ ನಕ್ಕಿಡಿ

ಇಕ್ಕಳ್ಳಿ ಸಾರ್ ಒಳ್ಳೆ ಬೀರ್ ಅಂತ ನನಗೇ ಮಾರಿದ

ಇವ, ನೋಡಿದ್ರೆ ಬರೀ ನೀರು !

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಕಥಾ ಚೆಲುಮೆ

ಭಿಕ್ಷೆ

ಕನಕಾಪುರ ನಾರಾಯಣ

ಪ್ರತಿನಿತ್ಯದಂತೆ ರಥವನೇರಿ ರಾಜನೊಬ್ಬನು ರಸ್ತೆಯಲ್ಲಿ ಸವಾರಿ ಹೋಗುತ್ತಿದ್ದನು. ಅದೇ ರಸ್ತೆಯಲ್ಲಿ ಒಬ್ಬ ಭಿಕ್ಷುಕ ಅಕ್ಕಿಯನ್ನು ಭಿಕ್ಷೆಯಾಗಿ ಪಡೆದು ಅದನ್ನು ತನ್ನ ಚೀಲಕ್ಕೆ ತುಂಬಿಕೊಳ್ಳುತ್ತಿದ್ದನು.ರಾಜನು ಬರುವುದನ್ನು ಕಂಡು ಭಿಕ್ಷುಕ ಅವನಲ್ಲಿಗೆ ಓಡಿಹೋದನು,ರಾಜನು ನೀನ್ಯಾರೆಂದು ಕೇಳಲು "ಸ್ವಾಮಿ ನಾನೊಬ್ಬ ನಿರ್ಗತಿಕ, ನನ್ನಲಿ ಏನೂ ಇಲ್ಲ, ಏನಾದರೂ ಭಿಕ್ಷೆ ನೀಡಿ, ಊಟ ಮಾಡಿ ಎರಡು ದಿನಗಳೇ ಆಗಿದೆ" ಎಂದ. ಅದಕ್ಕೆ ರಾಜನು "ನಿನಗೆ ಈ ರಾಜನಿಗೆ ನೀಡಲು ಏನೂ ಇಲ್ಲವೇ? ಬರೀ ಈ ಆರ್ತ ನುಡಿಗಳು ಮಾತ್ರವೇ?"ನನಗೇ ಎನಾದರೂ ಕೊಡು"ಎಂದ.

ಆಶ್ಚರ್ಯಗೊಂಡ ಭಿಕ್ಷುಕ ಬೇಸರದಿಂದ ಒಲ್ಲದ ಮನಸ್ಸಿನಲ್ಲಿ ತನ್ನ ಎರಡೇ ಎರಡು ಬೆರಳುಗಳಿಂದ ನಾಲ್ಕೇ ನಾಲ್ಕು ಅಕ್ಕಿ ಕಾಳನ್ನು ರಾಜನ ಕೈಗಿಟ್ಟ.ರಾಜ ತನ್ನ ಕುದುರೆಗಳಿಗೆ ಕಟ್ಟಿದ್ದ ಹಗ್ಗ ಜಗ್ಗಿ ಮುಂದಕ್ಕೆ ಸಾಗಿದ. ತನಗೆ ಏನೂ ನೀಡದೆ ಹೊರಟುಹೋದ ರಾಜನನ್ನು ಭಿಕ್ಷುಕ ಶಪಿಸಿದ. ಬೇರೆ ಹಾದಿಬೀದಿಗಳಲ್ಲಿ ಭಿಕ್ಷೆ ಬೇಡಿ ಸಂಜೆಯ ವೇಳೆಗೆ ಮನೆಗೆ ಬಂದ. ಮನೆಯಲ್ಲಿ ಒಂದು ದೊಡ್ಡ ಚೀಲದಲ್ಲಿ ಅಕ್ಕಿ ಇತ್ತು.ಆಶ್ಚರ್ಯದಿಂದ ಚೀಲದಲ್ಲಿ ಕೈಹಾಕಿ ನೋಡಲು ಒಂದು ಚಿನ್ನದ ನಾಣ್ಯ ಕಂಡಿತು.ಚೀಲವನ್ನು ತೆಗೆದು ಅಕ್ಕಿಯನ್ನು ಕೆಳಗೆ ಸುರಿದ.ಮತ್ತೊಂದು,ಮತ್ತೆ ಎರಡು ಹೀಗೆ ನಾಲ್ಕು ಚಿನ್ನದ ನಾಣ್ಯಗಳು ಸಿಕ್ಕಿದವು.ತಕ್ಷಣ ನೆನಪಿಗೆ ಬಂದಿತು "ಇದು ರಾಜನೇ ಕರುಣಿಸಿರುವ ಆಸ್ತಿ,ನಾನು ಉದಾರಿಯಾಗಿ ಕೈತುಂಬ ಅಕ್ಕಿ ಕಾಳನ್ನು ಕೊಟ್ಟಿದ್ದರೆ ಚೀಲದ ತುಂಬ ಚಿನ್ನದ ನಾಣ್ಯಗಳೇ ದೊರೆಯುತ್ತಿದ್ದವೇನೋ"ಎಂದುಕೊಂಡು ಬೇಸರ ಪಟ್ಟನು.ಕಾಲ ಮಿಂಚಿತ್ತು. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"



ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ಮಸಾಲೆ ಮಾವಿನ ಭಾತ್

ಬೇಕಾಗುವ ಸಾಮಗ್ರಿಗಳು

- ರುಬ್ಬಲಿಕ್ಕೆ-ಸಾಸಿವೆ 1 ಚಮಚ,ಜೀರಿಗೆ 1 ಚಮಚ,ಕಾಯಿತುರಿ ಅರ್ಧ ಲೋಟ,ಒಣ ಮೆಣಸಿನಕಾಯಿ 8-10,ಉಪ್ಪು ರುಚಿಗೆ,ಅರಿಸಿನ ಅರ್ಧ ಚಮಚ,ಮಾವಿನತುರಿ ಮುಕ್ಕಾಲು ಲೋಟ,ಇಂಗು 1 ಚಿಟಿಕೆ
- ಇತರೆ:ಎಣ್ಣೆ ಅರ್ಧ ಸೌಟು,ಜೀರಿಗೆ, ಮೆಂತ್ಯಕಾಳು, ಅರಿಸಿನ ಪ್ರತಿಯೊಂದೂ ಅರ್ಧ ಚಮಚ,ಕಡ್ಲೇ ಬೇಳೆ ಉದ್ದು ಎರಡು ಚಮಚ, ಕರಿಬೇವು ಸ್ವಲ್ಪ ಒಣಮೆಣಸಿನ ಕಾಯಿ ಎರಡು, ಕೊತ್ತಂಬರಿ ಅರ್ಧಕಂತೆ,ಅನ್ನ ಒಂದು ಲೋಟ ಅಕ್ಕಿಯದು

ಮಾಡುವ ವಿಧಾನ

- ರುಬ್ಬಲು ಹೇಳಿರುವ ಪದಾರ್ಥಗಳನ್ನು ಸೇರಿಸಿ ತರಿತರಿಯಾಗಿ ಪುಡಿಮಾಡಿ ಅಥವಾ ಗಟ್ಟಿಯಾಗಿ ರುಬ್ಬಿಕೊಳ್ಳಿ
- ಬಾಣಲೆಯಲ್ಲಿ ಎಣ್ಣೆಗೆ, ಜೀರಿಗೆ,ಮೆಂತ್ಯಕಾಳು,ಕಡ್ಲೇ ಬೇಳೆ ಉದ್ದು ಹಾಕಿ ಬಾಡಿಸಿ
- ಕೆಂಪಗಾದ ಮೇಲೆ ಅರಿಸಿನ,ಕರಿಬೇವು,ಒಣಮೆಣಸಿನ ಕಾಯಿ ಚೂರು, ನಂತರ ರುಬ್ಬಿದ ಮಿಶ್ರಣ ಹಾಕಿ ಬಾಡಿಸಿ,ಇಳಿಸಿ
- ಅದನ್ನು ಅನ್ನಕ್ಕೆ ಕೊತ್ತಂಬರಿ ಚೂರುಮಾಡಿ ಸೇರಿಸಿ ಕಲಸಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಂದರ ಲ್ಲೊಂದು ಒಗಟು

೧.ಸಂಗೀತ ಸುಧೆಯ ಉಣಬಡಿಸುವ ಮೂರಕ್ಷರದ ದೇವತೆ
೨.ಬಡವರ ಭಾಗ್ಯ ಮುದ್ದೆಯ ರಾಜ ಸೇರಿದರೆ ಒಂದು ಎರಡು
೩. ಮಾಮರದ ಹಣ್ಣು ಕುಕ್ಕುವಜಾಣ ಸೇರಿದರೆ ಕೊನೆಯೆರೆಡು
೪. ರಾಜನಿಗೆ ಮಡದಿ ಎಂಬಾರ್ಥ ಕೇಳು ಕೂಡಿದರೆ ಒಂದು ಮೂರು

ಉತ್ತರಕ್ಕೆ ಪುಟ ೧೧ ನೋಡಿ

ವಿಫಲ

ಏಕೆ ದೂರ ಸರಿದೆ ಚಿನ್ನ
ಮುತ್ತನಿಟ್ಟು ಒಮ್ಮೆ
ಹಾರ ಕಿತ್ತು ತೊರೆದೆ ನನ್ನ
ನಿಂಗೆ ಯಾವ ಹೆಮ್ಮೆ

ದೀಪ ಹಚ್ಚಿ ಬೆಳಕನಿಟ್ಟೇ
ಎದೆಯ ಗೂಡಿನೊಳಗೆ
ಕೋಪದಿಂದ ಉದಿ ಅದನು
ಸುರಿದೆ ಕತ್ತಲೊಳಗೆ

ಬರದೆ ಹೋದೆ ನನ್ನ ಕೂಡಿ
ಬಾಳ ದಾರಿಯಲ್ಲಿ
ಸರಿದು ಹೋದ ತಂಪ ಗಾಳಿ
ಬಹದು ಇನ್ನು ಎಲ್ಲಿ

ಕೊಟ್ಟ ಮಾತು ಸುಳ್ಳು ಮಾಡಿ
ತಳ್ಳಿ ಹೋದೆ ನೀನು
ತಿಳಿಯ ನೀರು ಆಯ್ತು ರಾಡಿ
ಮೋಸ ಹೋದೆ ನಾನು

ದೂರ ಹೋದರೇನು ನೀನು
ನನ್ನ ಕನಸ ತಾರೆ
ನಿನ್ನ ಬೆಳಕಿನಲ್ಲೇ ಹರಿವೆ
ಕಣ್ಣ ನೀರ ಧಾರೆ

ರಚನೆ: ಮಾಲು, ಅಡಿಲೇಡ್

ಜೀವನ ಪಥ ...

ಬಿಸಿಲಾದರೇನು ಮೀಟಬೇಕು ಹರಿಗೋಲ
ದಾಟಬೇಕು ನದಿಯ, ಹಠಹಿಡಿದ ಹಾಗೆ
ಬಿರುಗಾಳಿ ಬೀಸಲಿ, ತಂಗಾಳಿ ಸುಳಿಯಲಿ
ತುತ್ತಿನಾ ಚೀಲ ತುಂಬಿಸಲು ತಡಿಗೆ

ಜಗದಿ ಜನಿಸಿದ ಮೇಲೆ ಜಂಜಾಟವೆಲ್ಲ
ದುಡಿಯುವ ಕೈ ಒಂದು, ದಣಿವಿನ ಮಾತೆಲ್ಲಿ?
ನೆಚ್ಚಿಹ ಮನೆಯನ್ನು ನಂಬಿಹರ ಬದುಕನ್ನು
ರೂಪಿಸಲೇ ಬೇಕು ರಹದಾರಿಯಲ್ಲಿ

ಬಹಳೇನು ಬೇಕಿಲ್ಲ ಅಂದಂದಿನ ನಡೆಗೆ
ಕಿರುದೋಣಿ ಸಾಕಲ್ಲ ಬಿದಿರು ಕಡ್ಡಿಯ ಜೊತೆಗೆ
ಸಾಗಿಸಲು ಸರಕನ್ನು, ಮಾರಿ ಪರಿಕರಗಳ ತರಲು
ಪರಕೀಯನಲ್ಲ ನೀ ಪರಿಸರವೆ ಜೊತೆಗಿರಲು

ರಚನೆ: ಬಿ.ಎಸ್ . ವೆಂಕಟನಾರಾಯಣ , ಭೀಮಸಂದ್ರ

ಹಾಸ್ಯ ಚಿಲುಮೆ

ಸರ್ದಾರ್ ಒಬ್ಬ ಗ್ರಂಥಾಲಯದಲ್ಲಿ ಕಥೆ ಓದಲು ಒಂದು ದಪ್ಪವಾದ ಪುಸ್ತಕ ಹಿಡಿದು ಎಲ್ಲಾ ಪುಟಗಳನ್ನು ಓದಿ ಮುಗಿಸೇ ಬಿಟ್ಟ. ನಂತರ ಮನಸ್ಸಿನಲ್ಲೇ ಅಂದುಕೊಂಡ"ಅರೆ ಇದೇನ್ ಕಥೇಗಿಂತ ಬರೀ ಹೆಸರುಗಳೇ ಜಾಸ್ತಿ ಇದೆ"ಅಂತ..... ಅಷ್ಟರಲ್ಲಿ ಲೈಬ್ರೇರಿಯನ್ ಆ ಪುಸ್ತಕ ಕಸಿದು"ಇಲ್ಲಿದೆಯಾ ನಾನು ಆವಾಗ್ಲಿಂದ ಹುಡುಕುತ್ತಿದ್ದೆ ಈ ಯಲ್ಲೋ ಪೇಜಸ್ ನ"

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಜಾಣ ಕರ್ನಾಟಕ

೧. ಗಾಂಪ ಗುರುಗಳು ಮತ್ತು ಅವರ ಶಿಷ್ಯರನ್ನು ಸೃಷ್ಟಿಸಿದ ಕನ್ನಡದ ಖ್ಯಾತ ಹಾಸ್ಯ ಲೇಖಕರು ಯಾರು? ಇವರು ಬರೆಯುತ್ತಿದ್ದ ಹಾಸ್ಯಕ್ಕಾಗಿಯೇ ಮೀಸಲಾಗಿದ್ದ ಕನ್ನಡ ಮಾಸ ಪತ್ರಿಕೆ ಯಾವುದು.

೨. ವಿಶ್ವ ಮತ್ತು ವಿಶಾಲು ಯಾವ ಲೇಖಕರ ಹಾಸ್ಯ ಬರಹಗಳ ಪ್ರಮುಖ ಪಾತ್ರಧಾರಿಗಳು? ಇವರು ಸಾಹಿತ್ಯ ನೀಡಿರುವ ಎರಡು ಜನಪ್ರಿಯ ಹಾಸ್ಯ ದೂರದರ್ಶನದ ಧಾರಾವಾಹಿಗಳು ಯಾವುವು?

ಸರಿ ಉತ್ತರಕ್ಕೆ ಪುಟ ೧೨ ನೋಡಿ

ಒಂದರಲ್ಲೊಂದು ಒಗಟು – ಉತ್ತರ

೧.ರಾಗಿಣಿ ೨.ರಾಗಿ ೩.ಗಿಣಿ ೪.ರಾಣಿ

ಕಡಲು



ಕಡಲಿನ ಅಲೆಗಳ ಮೊರೆತ
ಮನಸಿನ ವಿಚಾರಗಳ ಭೊರ್ಗರಿತ
ಸಾಗರ ಕಾಣಿಸಿದೆ ಉಲ್ಲಾಸ
ಮನ ತುಂಬಿ ಬಂದಿದೆ ಸಂತಸ

ತುಂಬಿದೆ ಭೂಮಿಯ ಒಡಲು
ನಾ ದೊಡ್ಡವ ಅನ್ನುವ ತೇವಲು
ಸಾಗರದ ಎದರು ನಾವೆಷ್ಟು ಕೇವಲು
ಸ್ಥಿತಿಪ್ರಜ್ಞೆಯಂತೆ ಅನವರತ ಕಡಲು

ಸಿದ್ಧಾರ್ಥ ಬುದ್ಧನೇಕೆ ಆದ ?
ಅವನಿಗೆ ಬೇಕಿತ್ತೆ ಸಂಸಾರದ ಮೊಕ್ಷ ?
ಕಳೆದುಕೊಂಡ ಪರಿವಾರದ ಸಖ್ಯ
ಎಲ್ಲ ಬುದ್ಧನಂತರಾದರೆ ಬೆಳೆಯುವದೇ ಜಗತ್ತು?
ಯಾರಾದರೂ ಪಾರಾಗುವುದೇ ಸಂಸಾರದ ಚಿಂತೆ?
ಅನಿಸುವುದು ಇರಬೇಕು ಬಾಹುಬಲಿಯ ಹಾಗೆ...
ಹಮ್ಮು ಬಿಮ್ಮುಗಳನು ಬಿಸಾಕಿ ಆಚೆ
ನಿರ್ಗವ ಶಾಂತ ಮಂದಸ್ಮಿತನಂತೆ.....

-ಮಹಾಂತೇಶ್ . ಸಿ

ಓದುಗರ ಚೆನ್ನುಡಿ ...

ಚಿಲುಮೆಯ ಸಂಪಾದಕೀಯ ಸದಸ್ಯರೆಲ್ಲರಿಗೂ ನಮ್ಮ ಸಾದರ ಪ್ರಣಾಮಗಳು.

ನಿಮ್ಮೆಲ್ಲರ ಸುಸಮಯವನ್ನು ಕನ್ನಡ ಸೇವೆಗಾಗಿ ಮುಡಿಪಿಟ್ಟು, ಅಂದದ, ಚೆಂದದ ಪತ್ರಿಕೆಯನ್ನು ಹೊರತಂದ ನಿಮ್ಮ ಸುಪ್ರಯತ್ನಕ್ಕೆ ನಮ್ಮ ಮೆಚ್ಚುಗೆಗಳು. ನಿಮ್ಮೆಲ್ಲರ ಚೈತನ್ಯ ಸದಾ ಹೀಗೇ ಮುಂದುವರೆಯಲಿ. ಚಿಲುಮೆಯ ರಭಸ ಹೆಚ್ಚಾಗಿ, ಇನ್ನೂ ಜೋರಾಗಿ ಚಿಮ್ಮಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇವೆ.

-ಸುಮಾ ಅಶೋಕ್ , ಸಿಡ್ನಿ

Dear Horanada chilume team.

Horanada chilume articles are very nice this time, My hearty Ugadi wishes to all the writers.Please convey our appreciations to Nagashaila kumar, Madhusudana,Raji Jayadev, editorial,story writer Kanakapura Narayan and rangoli we enjoyed at the most of it.Thanks for such a nice collection even though you are in far away nation.Wonderful ....congrats once again

-ಹರಿಣಿ ರಾವ್ , ನವದೆಹಲಿ

I take this opportunity to wish you, all the office-bearers, contributors and readers of our beloved e-magazine HORANADA CHILUME, a very very Happy UGADI and good health and all prosperity in the coming year MANMATHANAMA SAMVATSARA.

- ರಾಘವೇಂದ್ರ ಮೂರ್ತಿ, ಬೆಂಗಳೂರು

ಚಾಣ ಕರ್ನಾಟಕ – ಉತ್ತರ

೧. ದಾಶರಥಿ ದೀಕ್ಷಿತ್, ಕೊರವಂಜಿ. ೨. ಎಂ. ಎಸ್. ನರಸಿಂಹಮೂರ್ತಿ, ಸಿಲ್ಲಿ ಲಲ್ಲಿ.

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ನಿಮ್ಮ ಮನವ ತಣಿಸಲೆಂದೇನೂ ಬಂದಿಲ್ಲ ಈ ರಾಸಾಯನಿಕ ಧಾತು.

೨. ಬೆಡಗಿನೊಡನೆಯೇ ಬಂತು, ವಯ್ಯಾರದ ಮತ್ತೊಂದು ಈ ಗುಣ.

೩. ದೇವರಿಗೆ ಪ್ರಭಾವಳಿಯಂತೆ, ನಮ್ಮ ನಾಡಿಗೆ ಅಲಂಕಾರ
ಕಡಲ ತೀರದ ಈ ಸುಂದರ ಪ್ರದೇಶ.

೪. ಕಾಯೊಳಗೆ ಟುಕುಟುಕು ಅಲ್ಲಾಡುವುದೇನು?

೫. ಕಿರಿಯದಾದರೂ ಪಿಳ್ಳಾರಿ ಗಣಪನಿಗೆ ಬೇಕಾಗುವ
ಈ ಹುಲ್ಲಿನ ಹಿರಿಮೆ ದೊಡ್ಡದೆ.

ಉತ್ತರ: ಶ್ವೇತವರ್ಣದ ಬೆಟ್ಟವನ್ನೇರಿದರೇನು,
ಕಾವೇರಿ ದ್ವೀಪವಾಸಿಯ ಬಣ್ಣ ಕಪ್ಪೇನೆ.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)
ಏಪ್ರಿಲ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಮಾರ್ಚ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಬಿ.ಆರ್. ವತ್ಸಲಾ ದ್ವಾರಕನಾಥ್, ಕೆ.ಜಿ.ಎಫ್
- ಪುಷ್ಪವಲ್ಲಿ ಚಂದ್ರಶೇಖರ್, ಕೆಂಗೇರಿ
- ಹರಿಣಿ ರಾವ್, ನವದೆಹಲಿ

ಮಾರ್ಚ್ ತಿಂಗಳ ಪದಪುಂಜದ ಉತ್ತರ

೧. ಪೋಲೀಸನ ಮಗಳಾಗಿಯೂ ಖ್ಯಾತಿಗಳಿಸಿದ ಜನಪ್ರಿಯ ರಂಗನಟಿ.

ಚೆಂ	ದೋ	ಡಿ	ಲೀ	ಲಾ

೨. ತಾರೆಯ ನಡುವಲ್ಲಿ ಅವರೆಯ ನಡುವು ಸೇರಿಕೊಂಡದ್ದಕ್ಕೆ ಕಮಲ ಬಂದಳು.

ತಾ	ವ	ರೆ

೩. ಲೆಕ್ಕವಿದ್ದೂ ಲೆಕ್ಕಹಾಕಲಾಗದಷ್ಟು.

ಅ	ಗ	ಣಿ	ತ

೪. ಕುದಿಯುವ ನೀರು ಮೈಮೇಲೆ ಬಿದ್ದಾಗ ಆಗಿದ್ದು. ಕೂಗಿದ್ದು.

ಬೊ	ಬ್ಬೆ

೫. ಆಗಿದ್ದು ಅಂತಿಂಥ ಸಂತೋಷವಲ್ಲ. ಬಲು ಬಲು ಸಂತೋಷ.

ಮ	ಹ	ದಾ	ನಂ	ದ

೬. ನಾನು ಹೇಳುವುದು ಬರಿಯ ಬಾಯಿ ಮಾತಲ್ಲ. ಹೃದಯದಿಂದ ಬಂದದ್ದು.

ಮ	ನ	ಸಾ	ರೆ

೭ ಕರ್ನಾಟಕದ ಪ್ರಸಿದ್ಧ ಎಲ್ಲಮ್ಮನ ಜಾತ್ರೆ ನಡೆಯುವ ಊರು.

ಸ	ವ	ದ	ತ್ತಿ

ಉತ್ತರ

ಪ್ರತಿಭಾವಂತ ಲೇಖಕಿಯರಿಗೆ ಒಲಿದು ಬರುವ ಇತಿಹಾಸ ಪ್ರಸಿದ್ಧ. ಕೊಡುಗೈ ಜೈನ ಭಕ್ತೆ.

ದಾ	ನ	ಚೆಂ	ತಾ	ಮ	ಣಿ
ಅ	ತ್ತಿ	ಮ	ಬ್ಬೆ		

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com
ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

NRI SEVA
Educational, Legal, financial, Health, Reality management services Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852

ಚುಕ್ಕಿಗಳು 8:15- ರಚನೆ: **ರಶ್ಮಿ ಸೋಮಶೇಖರ್**, ಬೆಂಗಳೂರು

ಮೊಬೈಲ್ ಮತ್ತು ದೇವರು !

ಸ್ಮಿತಾ ಮೇಲ್ಕೋಟೆ

ದ್ವಾಪರಯುಗ, ತ್ರೇತಾಯುಗ ಮತ್ತು ಕಲಿಯುಗ ಗೊತ್ತಲ್ಲವೇ. ಹಾಗೆ ಹೊಸ ಯುಗವೊಂದು ಸೃಷ್ಟಿಯಾಗಿದೆ. ಮೊಬೈಲ್ ಯುಗ. ಯಾರ ಕೈಯಲ್ಲಿ ನೋಡಿದರೂ ಮೊಬೈಲ್ಗಳ ಸುರಿಮಳೆ. ಮಾನವರೆಲ್ಲರ ಬಳಕೆಗೆ ಮೊಬೈಲ್ ಬಂದ ಮೇಲೆ, ಗುಡಿಯಲ್ಲಿನ ದೇವರಿಗೂ ಮೊಬೈಲ್ ಬೇಕೆನಿಸಿತು ತನ್ನ ನಾಲಕ್ಕೂ ಕೈಗಳಲ್ಲಿದ್ದ ಆಯುಧಗಳನ್ನು ಕೆಳಗಿಳಿಸಿ ಮೊಬೈಲ್ಗಳ ಕನಸು ಕಂಡ.

ಆಪಲ್ ಫೋನುಗಳ ರಾಜ ಸ್ಟೀವ್ ಜಾಬ್ ಅಲ್ಲೇ ಮೇಲಿರಬೇಕಾರೆ ಏನು ಚಿಂತೆ. ಬರ ಹೇಳಿದ ದೇವರು. ಸ್ಟೀವ್ ಜಾಬ್ ದೇವರನ್ನು ಕಂಡು, ಏನು ಮಹಾಸ್ವಾಮಿ ನನ್ನ ಬರ ಹೇಳಿದಿರಿ ಎಂದು ವಿನಮ್ರವಾಗಿ ಕೇಳಿದ. ನನಗೀಗ ತಕ್ಷಣ ಹೊಸ ನಮೂನೆಯ ಫೋನ್ ಒಂದು ಬೇಕು. ಮಾಡಿಕೊಡ ಬಲ್ಲೆಯಾ ಎಂದ ದೇವರು.

ಅದಕ್ಕೆ ಸ್ಟೀವ್ ಜಾಬ್ " ಸ್ವಾಮೀ ನಾನೇನೋ ಹೊಸ ಆಪಲ್ ತಂತ್ರ ಅಳವಡಿಸಿ ನಿಮಗೆ ಫೋನ್ ಮಾಡಿಕೊಡಬಹುದು, ಆದರೆ ಅದಕ್ಕೆ ಬೇಕಾದ ಸಲಕರಣೆಗಳು ಭೂಮಿ ಮೇಲೆ ಮಾತ್ರ ಸಿಗುವುದು. ಇಲ್ಲಿ ನಿಮಗೆ ನೆಟ್ವರ್ಕ್ ಕನೆಕ್ಷನ್ ಸರಿಯಾಗಿರೋದಿಲ್ಲ. ಯಾರ ಹತ್ತಿರ ಫೋನ್ ಮಾಡಿದ್ರು ಅರ್ಧಂಬರ್ಧ ಕೇಳುತ್ತೆ ಅಥವಾ ಕೇಳಿಸದೇ ಕೂಡ ಇರಬಹುದು, ನಿಮ್ಮ ಮಹಾಭಕ್ತ ಮಂಡಳಿಗೆ ಕೇಳಿದರೆ ಇಲ್ಲಾ ಅನ್ನುವರೆ? ಎಂದುಬಿಟ್ಟ.

ದೇವರಿಗೆ ಇದರಿಂದ ಸ್ವಲ್ಪ ಬೇಸರ ಆದರೂ ತೋರಿಸಿಕೊಳ್ಳದೆ, ಸರಿ ಇನ್ನೇನು ಮಾಡಬಹುದು ಎಂಬ ಯೋಚನೆಯಲ್ಲಿ ತೊಡಗಿದ. ಒಂದು ಉಪಾಯ ಹೊಳೆಯಿತು. ಒಂದು ವಾರ, ಎರಡು ವಾರ, ಜನಗಳ ಮೊಬೈಲ್ ಪ್ರೇಮವನ್ನು ಪತ್ತೆ ಹಚ್ಚಲು ಭೂಮಿಯ ಮೇಲೆ ಬಂದ. ಎಲ್ಲಿ ನೋಡಿದರಲ್ಲಿ ಮೊಬೈಲ್ ಬಳಕೆ. ಜನ ಮಾತಾಡುವುದೇ ಮೊಬೈಲ್ನಲ್ಲಿ. ಎದುರು ಸಿಕ್ಕಿದರೆ ಪಾಪ ಏನೂ ಹೇಳಲು ತೋಚುವುದಿಲ್ಲ, ಆದರೆ ಮೊಬೈಲ್ ಕೈಗೆ ಬಂದ ತಕ್ಷಣ, ಜನಗಳ ಮಾತುಕತೆ ನಿರಂತರ. ಬಸ್ಸಲ್ಲಿ, ರೈಲಿನಲ್ಲಿ, ಆಟೋರಾಜ ಕೂಡ ಈಗ ಮೊಬೈಲ್ ರಾಜ. ಮಕ್ಕಳು ಮರಿ ಎಲ್ಲರಿಗೂ ಮೊಬೈಲ್ ಫೇವರೇಟ್. ದೇವರಿಗೆ ಆಶ್ಚರ್ಯ, ದೇವಸ್ತಾನದಲ್ಲಿ ಕೂಡ ತನ್ನ ಜೊತೆ ಸೆಲ್ಫಿ ಕ್ಲಿಕ್ಕಿಸುತ್ತಿದ್ದಾರೆ. ದೇವರೇ ಸುಸ್ತಾದ. ಇದಕ್ಕೊಂದು ಉಪಾಯ ಮಾಡಬೇಕು ಎಂದುಕೊಂಡ.

ಸರಿ ಒಂದು ರಾತ್ರಿ ತನ್ನ ಮೊಬೈಲ್ ಭಕ್ತರ ಕನಸಲ್ಲಿ ಬಂದು ನನಗೆ ನಿಮ್ಮ ಮೊಬೈಲ್ ಅರ್ಪಣೆ ಮಾಡಿ, ನಿಮಗೆ ನಾನು ಸನ್ಮಂಗಳವನ್ನು ಉಂಟು ಮಾಡುವೆ ಎಂದು ಆಜ್ಞೆ ಮಾಡಿದ. ಮೊಬೈಲ್ ಭಕ್ತರು ಸಾಲು ಸಾಲಾಗಿ ನಿಂತು ತಮ್ಮ ಹೊಸ ಮೊಬೈಲ್, ಹಳೆ ಮೊಬೈಲ್, ಮಂಗಳಾರತಿ ತಟ್ಟೆಯಲ್ಲಿ ಹಾಕ ತೊಡಗಿದರು. ಇದನ್ನು ಕಂಡ ಹಲವರು, ಏನಿದು ಮೊಬೈಲ್ ಪೂಜೆಯೇ ಅಂತ, ತಾವು ಕೂಡ ಸಿಮ್ ಕಾರ್ಡ್, ಚಾರ್ಜರ್, ಮೊಬೈಲ್ ಕವರ್, ಡಾಟಾ ಕಾರ್ಡು, ಅದು ಇದು ಅಂತ ಸರ್ವಸ್ವವನ್ನು ಅರ್ಪಿಸತೊಡಗಿದರು. ದೇವರಿಗೆ ಇದರಿಂದ ಸಂತೋಷವೇ ಸಂತೋಷ. ಒಂದೇನು ನೂರಾರು ಹೊಸ ಮೊಬೈಲ್ಗಳು ತನ್ನ ಕಡೆಗೆ ಹರಿಯುತ್ತಿವೆ. ಹೊಸ ಹೊಸ app ನೋಡಿ, ಇದೇನು ನನ್ನ ಸೃಷ್ಟಿಗಿಂತ ಅದ್ಭುತವಾಗಿದೆ ಎಂದು ಬೀಗಿದ. ಹೆಂಡತಿ ದೇವಲೋಕದಿಂದ ಕರೆ ಮಾಡಿದಾಗ ಪ್ರೀತಿಯಿಂದ, ನನಗೆ ನೆಟ್ವರ್ಕ್ ಸಿಗುವುದು ಭೂಮಿ ಮೇಲೆ ಮಾತ್ರವೇ. ಇನ್ನೂ ಸ್ವಲ್ಪ ಕಾಲ ಇಲ್ಲೇ ಇರಬೇಕು ನಾನು ಎಂದುಬಿಟ್ಟ.

ದೇವಸ್ತಾನಗಳಲ್ಲಿ ಅರ್ಚನೆ ಬೋರ್ಡ್ ನಲ್ಲಿ ಹೀಗೆ ಬರೆಯಲ್ಪಟ್ಟಿತ್ತು. ನವ ನವೀನ ಮೊಬೈಲ್, ಐಪಾಡ್, ಟ್ಯಾಬ್ಲೆಟ್ ಅರ್ಪಿಸಿದವರ ಹೆಸರು ಮತ್ತು ಅವರ ನಂಬರ್ ಬೋರ್ಡ್ ಮೇಲೆ ಬರೆಯಲಾಗುವುದು. ಚಾರ್ಜರ್ ಮತ್ತು ಫೋನ್ ಕವರ್ ಗಳನ್ನೂ ದಯವಿಟ್ಟು ಹುಂಡಿಯಲ್ಲಿ ಹಾಕಬೇಡಿ. ಚಿಕ್ಕ ಸಿಮ್ ಕಾರ್ಡ್ ಮಾತ್ರವೇ ಹುಂಡಿಯಲ್ಲಿ ಹಾಕಿ. ನಿಮ್ಮ ಮೊಬೈಲ್ ಸೇವೆ ದೇವರಿಗೆ ಆದಮೇಲೆ, ಪ್ರಸಾದವಾಗಿ ಹಳೆಯ ಮಾಡೆಲ್ ಮೊಬೈಲ್ ಅನ್ನು ತೆಗೆದುಕೊಳ್ಳುವುದು. ಮೊಬೈಲ್ ಅರ್ಚನೆ, ಮೊಬೈಲ್ ಅಭಿಷೇಕ, ಚಾರ್ಜರ್ ಹಾರ, ಸಿಮ್ಮಾರ್ಡ್ ಹಾರಗಳು ಕೂಡ ಲಭ್ಯ ಇಲ್ಲಿ. ಶನಿವಾರ ಮತ್ತು ಭಾನುವಾರ ಮೊಬೈಲ್ ದೇವರಿಗೆ ಬಿಡುವಿಲ್ಲದ ಪೂಜೆ. ಮೊಬೈಲ್ ದೇವಸ್ಥಾನಗಳು ಕೂಡ ಹೆಚ್ಚಿದವು.

ಮೊಬೈಲ್ ದಾನಿಗಳು ದೇವರಿಗೆ ಮೊಬೈಲ್ ಅರ್ಪಿಸಿದ ಮೇಲೆ, ತಮ್ಮ ಜೀವನವೇ ಬದಲಾಯಿಸಲ್ಪಟ್ಟಿತು. ಮನೆಯವರ ಮತ್ತು ಗೆಳೆಯರ ಹತ್ತಿರ ಮಾತುಕತೆ ಹೆಚ್ಚಿತು. ಸೌಹಾರ್ದತೆ ಬೆಳೆಯಿತು. ಮೊಬೈಲ್ ಬಳಕೆ ಕಡಿಮೆ ಮಾಡಿದ ಮೇಲೆ ಸಂಬಂದಕ್ಕೆ ಹೊಸ ಅರ್ಥ ಬಂತು. ಎಷ್ಟೊಂದು ಸಮಯ ನಮ್ಮಪಾಲಾಗಿದೆಯಲ್ಲಾ, ಇದೆಲ್ಲಾ ನಮಗೆ ಮೊಬೈಲ್ ದೇವರು ನೀಡಿದ ವರ ಎಂದೆಣಿಸಿದರು.

ಇತ್ತ ಲೇಟೆಸ್ಟ್ ಮೊಬೈಲ್ ಹಿಡಿದ ದೇವರು, ಭೂಮಿ ಬಿಟ್ಟು ಬರಲೇ ಇಲ್ಲ. ಮೊಬೈಲ್ ರೋಗವನ್ನು ಸ್ವಲ್ಪ ಮಟ್ಟಿಗೆ ಕಮ್ಮಿ ಮಾಡಿದ ದೇವರು ಪಾಪ ಮೊಬೈಲ್ ಗೆ ಅಂಟಿಕೊಂಡಿದ್ದ. ತನ್ನ ದಿನ ನಿತ್ಯದ ಕೆಲಸಗಳನ್ನು ಮೊಬೈಲ್ ಮೂಲಕವೇ ಮುಗಿಸಿಬಿಟ್ಟ. ಬೆಳಿಗ್ಗೆ ಇಂದ ರಾತ್ರಿಯವರೆಗೆ ಮೊಬೈಲ್ ದೇವರಿಗೆ ಬಿಡುವಿಲ್ಲ. ಯಾವ ದೇವರ ಫೋಟೋ ಯಾರು ಶೇರ್ ಮಾಡಿದ್ದಾರೆ, ಯಾರ ದೇವರ ಫೋಟೋಗೆ ಲೈಕ್ ಬಂದಿದೆ. ಅದು ಇದು ನೋಡುತ್ತಲೇ ಕಾಲ ಕಳೆದುಬಿಟ್ಟ.

ಮೊಬೈಲ್ ದೇವರ ದೇವಸ್ತಾನ ಈಗಲೂ ಭೂಮಿಯ ಮೂಲೆ ಮೂಲೆಯಲ್ಲಿ ಇದೆಯಂತೆ!!!

ನೀವೊಂದು ಬಾರಿ ಖಂಡಿತ ಭೇಟಿ ನೀಡಿ.

ಮೊಬೈಲಾಯ ನಮಃ !

April Fool … ☺ ☺ ☺ ▪

ವಿಜ್ಞಾನ

ಏಪ್ರಿಲ್ ಟ್ರಿಕ್ – ಮಾಯಾ ಡಬ್ಬ

ಸಂಕಲನ: ಬದರಿ ತ್ಯಾಮಗೊಂಡ್ಲು

ಏಪ್ರಿಲ್ ನಲ್ಲಿ ಟ್ರಿಕ್ ಮಾಡದಿದ್ದರೆ ಹೇಗೆ! ಈ ಚಟುವಟಿಕೆಯನ್ನು ಮಾಡಿ, ಅದರ ಹಿಂದಿರುವ ತತ್ವವನ್ನೂ ತಿಳಿದುಕೊಳ್ಳೋಣ.

ಬೇಕಾಗುವ ಸಾಮಗ್ರಿ:

- ಗುಂಡಗಿನ ಒಂದು ಕ್ಯಾನ್ (ಡಬ್ಬ)
- (ಹಳೇ ಕಾಫಿ ಪುಡಿ ಡಬ್ಬ ಅಥವಾ ಪ್ರಿಂಗ್ಲಲ್ ಚಿಪ್ಸ್ ಡಬ್ಬ ಇತ್ಯಾದಿ)
- 2 ಪೇಪರ್ ಕ್ಲಿಪ್ಸ್, ಒಂದು ಸ್ಕ್ರೂ ಡ್ರೈವರ್
- 9 ವೋಲ್ಟ್ ಬ್ಯಾಟರಿ ಅಥವಾ ಸುಮಾರು ಅಷ್ಟೇ ತೂಕವುಳ್ಳ ವಸ್ತು
- ಗಟ್ಟಿಯಿರುವ ಉದ್ದದ ರಬ್ಬರ್ ಬ್ಯಾಂಡ್, ಅಂಟಿಸಲು ಟೇಪ್



ವಿಧಾನ:

- ಕ್ಯಾನಿನ ಎರಡೂ ತುದಿಯ ಮಧ್ಯದಲ್ಲಿ ಸ್ಕ್ರೂ ಡ್ರೈವರ್ ಬಳಸಿ ಪುಟ್ಟ ರಂಧ್ರವನ್ನು ಮಾಡಿರಿ
- ಟೇಪ್ ಸಹಾಯದಿಂದ, 9 ವೋಲ್ಟ್ ನ ಬ್ಯಾಟರಿಯನ್ನು (ಅಥವಾ ಅದೇ ತರಹದ ವಸ್ತು) ರಬ್ಬರ್ ಬ್ಯಾಂಡ್ ಗೆ ಅಂಟಿಸಿ
- ಪೇಪರ್ ಕ್ಲಿಪ್ ಉಪಯೋಗಿಸಿ, ಚಿತ್ರದಲ್ಲಿ ತೋರಿಸಿದಂತೆ, ರಂದ್ರದ ಮೂಲಕ ರಬ್ಬರ್ ಬ್ಯಾಂಡ್ ತೂರಿಸಿ ಬಿಗಿಯಾಗಿ ಹಿಡಿಯುವಂತೆ ಮಾಡಿ. ಟೇಪ್ ಅಂಟಿಸಿದರೆ ಉತ್ತಮ.
- (ಬ್ಯಾಟರಿ ಡಬ್ಬಕ್ಕೆ ತಾಕದಂತಿರುವಂತೆ ರಬ್ಬರ್ ಬ್ಯಾಂಡ್ ಅನ್ನು ಎಳೆದು ಕಟ್ಟ ಬೇಕಾಗಬಹುದು)
- ಒಳಗೆ ಏನು ಮಾಡಿದ್ದೀರಿ ಎನ್ನುವುದು ತಿಳಿಯದಂತೆ, ಡಬ್ಬದ ಹೊರಮೈಗೆ ಚೆಂದದ ಕಾಗದ ಅಂಟಿಸಿಬಹುದು
- ಎಲ್ಲವೂ ಸರಿಯಾಗಿ ಮಾಡಿದ್ದರೆ, ಕ್ಯಾನ್ ಅನ್ನು ಸಮತಟ್ಟು ಇರುವ ನೆಲದ ಮೇಲೆ ಉರುಳಿಸಿ
- ಒಂದಷ್ಟು ದೂರ ಹೋಗಿ ನಿಮ್ಮ ಬಳಿಯೇ ವಾಪಸ್ಸು ಬರುತ್ತದೆ. ಹೇಗಿದೆ ಟ್ರಿಕ್?

ಏನಾಗುತ್ತಿದೆ:

ಈ ಪ್ರಯೋಗದ ಮೂಲ ಉದ್ದೇಶ ಶಕ್ತಿಯ ವರ್ಗಾವಣೆಯನ್ನು ತೋರಿಸುವುದು. ನೀವು ಡಬ್ಬವನ್ನು ಉರುಳಿಸಿದಾಗ, ಅದು ಚಲನಾ ಶಕ್ತಿಯಿಂದ (kinetic energy) ಮುಂದಕ್ಕೆ ಚಲಿಸುತ್ತದೆ. ಚಲಿಸಿದಂತೆಲ್ಲ, ಬ್ಯಾಟರಿಯು (ಅಥವಾ ಇನ್ನಿತರ ಭಾರವಾದ ವಸ್ತು) ರಬ್ಬರ್ ಬ್ಯಾಂಡ್ ಅನ್ನು ಸುತ್ತುತ್ತಾ ಹೋಗುತ್ತದೆ. ಚಲಿಸುತ್ತಿರುವ ಡಬ್ಬದ ಚಲನಾ ಶಕ್ತಿ ಮುಗಿದಾಗ, ಸುತ್ತಿಕೊಂಡಿರುವ ರಬ್ಬರ್ ಬ್ಯಾಂಡ್ ನಲ್ಲಿ ಶೇಖರವಾಗಿರುವ ಅಂತಸ್ಥ ಶಕ್ತಿಯು, ರಬ್ಬರ್ ಬ್ಯಾಂಡ್ ಅನ್ನು ಬಿಚ್ಚಿಡುತ್ತಾ ಹೋಗುತ್ತದೆ. ರಬ್ಬರ್ ಬ್ಯಾಂಡ್ ಬಿಚ್ಚಿಕೊಳ್ಳುವಿಕೆಯು ವಿರುದ್ಧ ದಿಕ್ಕಿನಲ್ಲಿ ಆಗುವುದರಿಂದ, ಡಬ್ಬವು ನಿಮ್ಮ ಬಳಿಗೆ ಮತ್ತೆ ತಿರುಗುತ್ತಾ ಬರುತ್ತದೆ. ▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

೨೦೧೫ ಸಿಡ್ನಿ ಯುಗಾದಿ ಹಬ್ಬ

ಸಿಡ್ನಿ ಕನ್ನಡ ಶಾಲೆ ಮತ್ತು ಸುಗಮ ಗಾನ ಸಮಾಜ ಸಾದರಪಡಿಸುತ್ತಿದೆ

ಮಕ್ಕಳು ಹಾಗೂ ಹಿರಿಯರಿಂದ ಸಂಗೀತ, ನೃತ್ಯ, ಕನ್ನಡ ಕ್ಯಾರೆಯೋಕೆ ಗಾಯನ ಒಳಗೊಂಡ

ಮನರಂಜನೆ **(18-04-2015, ಶನಿವಾರ, ಸಮಯ: 05:30 PM)**

ನಡೆಯುವ ಸ್ಥಳ :

Wattlegrove Public School, Cressbrook Drive NSW 2163

ಪ್ರವೇಶ ಕುಟುಂಬಕ್ಕೆ :**$20**

ಇದು ಕನ್ನಡ ಶಾಲೆಯ ಸಹಾಯಧನಕ್ಕಾಗಿ ಏರ್ಪಡಿಸಿರುವ ಕಾರ್ಯಕ್ರಮ

ವರಸಿದ್ಧಿವಿನಾಯಕ ಮಹಾಭಿಷೇಕ, ಹೆಲೆನ್ಸ್ ಬರ್ಗ್

19-April-2015 (8:00 AM – 12:00 PM)

Sri Venkateshwara Temple,

Temple Road, Helensburgh

NSW 2508

More Info: http://www.svtsydney.org/

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.

ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.